Registered No. M. 1393.

ಕರ್ನಾಟಕ

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ಸಂಪುಟ ೨೨ | ಮಂಗಳೂರು, ೧೯ಳಂನೇ ಇಸವಿ ಜುಲೈ ತಾರೀಕು ೧೯ನೇ ಶುಕ್ರವಾರ | ಸಂಚಿಕೆ ೩೨

VOL. XXII | MANGALORE, FRIDAY, JULY 19, 1940 | NO. 32

ಬ್ರಿಟನ್ನಿಗೆ ಬೆದರದಿದ್ದರೂ ಜರ್ಮನಿಗೆ ಬಾಗದ ರಾಷ್ಟ್ರ

ಡಿ'ವೆಲರನ ಐಯರ್‌ಲ್ಯಾಂಡ್——ಸ್ವಾತಂತ್ರ್ಯವೆಂದರೆ ಸಾವನ್ನೂ ಇದಿರಿಸುವ ದೇಶ

ಬ್ರಿಟನ್ನಿನೊಡನೆ ಪ್ರಕೃತದ ಸಮರದಲ್ಲಿ ಸಹಕರಿಸಲಾರೆನೆಂದು, ಬ್ರಿಟನ್ನಿಗಾಗಲೀ ಅಥವಾ ಇನ್ನಾವ ಪರರಾಷ್ಟ್ರಕ್ಕಾಗಲೀ ತನ್ನಲ್ಲಿ ಕಾಲೂರಲು ಬಿಡೆನೆಂದು, ಸ್ವಾತಂತ್ರ್ಯ ಪ್ರೇಮದಿಂದ ಮೈಮರೆತು ಇಂದಿನ ಭೀಕರ ಯುದ್ಧದಲ್ಲೂ ತಾಟಸ್ಥ್ಯ ಧೋರಣೆಯನ್ನು ವಹಿಸಿ ತಲೆ ಎತ್ತಿನಿಂದ ಐಯರ್‌ಲ್ಯಾಂಡಿನ ಇತಿಹಾಸವೇನು?

೧೧೫೨ರ ತನಕವೂ ಐಯರ್‌ಲ್ಯಾಂಡು ಹಲವಾರು ವಿಭಾಗಗಳಾಗಿ ಮಾರ್ಪಡಿಸಲ್ಪಟ್ಟಿದ್ದು, ಹಲಕೆಲವು ತುಂಡು ಪಾಳೆಯಗಾರರಿಂದ ಆಳಲ್ಪಡುತ್ತಿತ್ತು. ಈ ಪಾಳೆಯಗಾರರೆಲ್ಲ ಒಬ್ಬ ಚಕ್ರವರ್ತಿಯ ಅಂಕೆಗೆ ಬಾಗಿದ್ದರು. ಭಾರತದ ಇತಿಹಾಸದಲ್ಲಿನ ದೇಶದ್ರೋಹೀ ಅರಸರಂತೆ ೧೧೫೨ರಲ್ಲಿ ಒಬ್ಬ ಪಾಳೆಯಗಾರನು ಚಕ್ರವರ್ತಿಯನ್ನು ಇದಿರಿಸುವದಕ್ಕಾಗಿ, ಇಂಗ್ಲಾಂಡಿನ ಅಂಗ್ಲೊ-ನೋರ್ಮನ್‌ರ ಸಹಾಯವನ್ನು ಬೇಡಿ, ಅವರು ಐಯರ್‌ಲ್ಯಾಂಡಿನಲ್ಲಿ ಕಾಲಿರಿಸುವಂತೆ ಮಾಡಿದನು. ಸರಿ! ಅಂದಿನಿಂದ ಮುಂದೆ ದೇಶೀಯ ಚಕ್ರವರ್ತಿಯ ಬದಲು ಪರದೇಶೀಯನ ಅಂಕೆಗೆ ಬಾಗುವ ಭಾಗ್ಯ ಐಯರ್‌ಲ್ಯಾಂಡಿನ ಪಾಳೆಯಗಾರರಿಗೆ ಬಂದಿತು. ಮುಂದೆ ಎನೇ ಹೆನ್ರಿಯು ತಾನೇ ಐಯರ್‌ಲ್ಯಾಂಡಿಗೂ ಅರಸನೆಂದು ಸಾರಿಕೊಂಡನು. ಐರಿಷ್ ಜನತೆಗಂತೂ ಇಂಗ್ಲೀಷರ ಆಳ್ವಿಕೆಯಿಂದ ಸಿಟ್ಟು ಏರಿತು. ಮಾತ್ರವಲ್ಲ; ಧರ್ಮದ ಹೆಸರಲ್ಲಿ ವಿವಿಧ ಅಕೃತ್ಯವಾಗುತಿದ್ದ ಆ ಕಾಲದಲ್ಲಿ, ಇಂಗ್ಲಾಂಡಿನ ಆಂಗ್ಲೋ ಸೆಕ್ಸನರು ಧರ್ಮದಲ್ಲಿ ಬದಲಾವಣೆ ತಂದುಕೊಂಡರೂ, ಐರಿಷ್ ಜನತೆ ರೋಮನ್ ಕೆಥೊಲಿಕರಾಗಿಯೇ ಉಳಿದರು. ಧರ್ಮದ ಹೆಸರಲ್ಲಿ ಮುಂದೆ ಯುದ್ಧ ಆರಂಭವಾಯಿತು. ಕ್ರೋಮ್‌ವೆಲ್‌ನಂತೂ ಇಂದಿನ ಅಲ್ಸ್ಟರ್ ಪ್ರಾಂತ್ಯದಿಂದ ಐರಿಷ್ ಜನತೆಯನ್ನು ಬಲಾತ್ಕಾರವಾಗಿ ತಳ್ಳಿ ಅಲ್ಲಿ ಪ್ರೊಟೆಸ್ಟಾಂಟರನ್ನೂ, ಸ್ಕೊಟ್‌ಲ್ಯಾಂಡಿನವರನ್ನೂ ನೆಲೆನಿಲ್ಲಿಸಿದ. ೨ನೇ ಜೇಮ್ಸನು ಫ್ರೆಂಚರ ಸಹಾಯದಿಂದ ದಂಡೆತ್ತಿ ನಡೆದರೂ ಬೊಯ್ನೆ ಎಂಬಲ್ಲಿ ೧೬೯೦ರಲ್ಲಿ ಸೋಲಿಸಲ್ಪಟ್ಟ!

ಇಂಗ್ಲಾಂಡಿನ ಅಂಕೆಗೆ ಬಾಗಿದ್ದ ಐಯರ್‌ಲ್ಯಾಂಡಿನ ಪಾರ್ಲಿಮೆಂಟೊಂದು ೧೭೦೦ರ ತನಕ ಬಾಳಿಕೊಂಡಿತ್ತು. ಆ ಬಳಿಕ ಐಯರ್‌ಲ್ಯಾಂಡನ್ನೂ ಇಂಗ್ಲಾಂಡ್—ಸ್ಕಾಟ್‌ಲ್ಯಾಂಡ್‌ಗಳೊಡನೆ ಸೇರಿಸಿ, ಗ್ರೇಟ್ ಬ್ರಿಟನ್ ಎಂಬ ನಾಮಕರಣ ಮಾಡಲಾಯಿತು. ಆ ಕಾಲದಲ್ಲಿ ಐಯರ್‌ಲ್ಯಾಂಡಿನ ಜನತೆಯೂ ಇಂಗ್ಲಾಂಡಿನ ಜನತೆಯೊಡನೆ ಸಂಬಂಧ ಬೆಳೆಸಿ ತಮ್ಮ ಜನಾಂಗದ ಮೂಲವನ್ನು ಕಳೆದುಕೊಂಡಿದ್ದರು. ಆದರೂ ಅವರ ಸ್ವಾತಂತ್ರ್ಯಕಾಂಕ್ಷೆ ಅಳಿದಿರಲಿಲ್ಲ. ಹೆಚ್ಚಿನ ನೆಲವು ಇಂಗ್ಲೀಷ್ ಧನಿಕರದಾಗಿತ್ತು; ಐರಿಷ್ ಜನರು ಬರೇ ರೈತರಾಗಿ ಉಳಿದರು. ಮಾತ್ರವಲ್ಲದೆ ಬೆಳೆ ಬೆಳೆಯದೆ ಅವರು ಗೇಣಿ ತೆರಲಾರದಾದಾಗ, ನಿಷ್ಕರುಣೆಯಿಂದ ಬ್ರಿಟಿಷ್ ಧನಿಕರು ಅವರನ್ನು ಆಸ್ತಿಯಿಂದ ಹೊರತಳ್ಳಿ ಓಡಿಸುತ್ತಿದ್ದರು; ನಿರಾಧಾರಿಗಳಾಗಿ ಮಾಡುತ್ತಿದ್ದರು. ಪರಿಣಾಮವಾಗಿ ಐರಿಷ್ ಜನತೆ ನಿಧಾನವಾಗಿ ಅಮೇರಿಕೆಯ ಕಡೆಗೆ ಸರಿದರು. ಅಂತೂ ೧೯ನೆಯ ಶತಮಾನದಲ್ಲಿ ಈ ಜನಾಂಗದ ಸಂಖ್ಯೆ ಕುಂದುತ್ತಾ ಬಂದಿತು.

ಈ ಪರಿಸ್ಥಿತಿಯನ್ನು ಕಂಡು ಗ್ಲೇಡ್‌ಸ್ಟನ್ ಸರಕಾರವು ತಕ್ಕ ವ್ಯವಸ್ಥೆ ನಡೆಸಲು ಮುಂದಾಯಿತು. ಐಯರ್‌ಲ್ಯಾಂಡಿನ ಜಮೀನು ಸಮಸ್ಯೆಯನ್ನು ಬಗೆಹರಿಸಿ, ಜನತೆಯು ರಾಷ್ಟ್ರವನ್ನು ಬಿಡದಂತೆ ಮಾಡಿತು. ೧೯೧೨ರಲ್ಲಿ ಆಸ್ಕ್ವಿತ್ ಸರಕಾರವು ಐಯರ್‌ಲ್ಯಾಂಡಿಗಾಗಿ ಹೋಂ ರೂಲ್ ಬಿಲ್ಲನ್ನು ತರಲೆಳಸಿ, ಇಂಗ್ಲಾಂಡಿನ ಮುಂದಿಯಿಂದ ತುಂಬಿದ ಅಲ್ಸ್ಟರ್, ಇದನ್ನು ಕಠಿನವಾಗಿ ವಿರೋಧಿಸಿದುದರ ಪರಿಣಾಮವಾಗಿ ಅಲ್ಸ್ಟರ್ - ಈ ಬಿಲ್ಲನ್ನು ವಿರೋಧಿಸಲೆಂದೂ, ಐಯರ್‌ಲ್ಯಾಂಡು— ಸಮರ್ಥಿಸಲೆಂದೂ ಸ್ವಯಂಸೇ

[ಪುಟ ೮ ನೋಡಿ]



ಜರ್ಮನಿಯತ್ತ ದಿಟ್ಟಿಸಿ ಹಿಂದಿರುಗುತ್ತಿದೆ.

ಜರ್ಮನಿಯ ಆಕ್ರಮಣಕ್ಕೀಡಾಗಿರುವ ಹಾಲೇಂಡ್ ಬೈಟ್‌ನ ಕಡೆ—ನಾಜಿ ವಿಮಾನ ನಿಲ್ದಾಣಗಳೆಡೆ—ಸರಿದು ಇದೀಗ ಹಿಂದಿರುಗಿ ಇಂಗ್ಲಾಂಡಿನ ಆಗ್ನೇಯ ದಿಕ್ಕಿಗೆ ಈ ವಿಮಾನ ಹಾರಾಡುತ್ತಿದೆ. ರಕ್ಷಣಾ ಗಸ್ತುಹಾಕುವ ಈ ಕಾರ್ಯವು ಆರ್. ಎ. ಎಫ್. ದಳಗಳಿಂದ ಸದಾ ಸಾಗುತ್ತಿರುತ್ತದೆ.

ನಾನು
ಅಳುತ್ತಾ ಇರುವೆನು

ತಾಯಿಯು ನನಗೆ
ಗ್ಲಾಕ್ಸೋ
ಕೊಡುವಲ್ಲಿ ವರೆಗೆ

Glaxo

ರಾಜಾ ಸ್ನೋ
ಅಂದಕ್ಕಾಗಿ
ಮಣ್ಯಂ ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

ರಷ್ಯದಲ್ಲಿ ಸ್ತ್ರೀರಾಜ್ಯ

ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದೆ ರಷ್ಯದ ಹೆಂಗುಸರೆಂದರೆ ನಮ್ಮಲ್ಲಿಯ ದನಕರುಗಳಿಗಿಂತ ಹೀನವಾಗಿದ್ದರು. ಗಂಡುಸರ ನಿರ್ದಯವಾದ ಪೆಟ್ಟುಗಳನ್ನು ಸಹಿಸಿ ಗುಲಾಮರಿಗಿಂತ ಕೀಳಾಗಿದ್ದರು. ಇಂದು ಅಲ್ಲಿನ ಸ್ತ್ರೀಯರು ರಾಜ್ಯದ ಆಡಳಿತೆಯ ಪ್ರತಿಯೊಂದು ಭಾಗದಲ್ಲಿಯೂ ಕೆಲಸ ಮಾಡುವರೆಂದರೆ ಆಶ್ಚರ್ಯಪಡದವರಾರು? ರಾಜ್ಯಕ್ರಾಂತಿಯೊಂದಿಗೆ ಸ್ತ್ರೀಯರಲ್ಲಿಯೂ ಕ್ರಾಂತಿಯಾಯಿತು. ಕಮ್ಯೂನಿಸ್ಟ್ ಮುಂದಾಳುಗಳು ಹೆಂಗುಸರನ್ನು ಸ್ವತಂತ್ರರನ್ನಾಗಿ ತಮ್ಮಷ್ಟೇ ಅಧಿಕಾರವನ್ನು ಅವರಿಗೂ ಕೊಟ್ಟರು. ಈ ಉದ್ದೇಶವು ಪೂರ್ಣವಾಗಲು, ಸತ್ಯವಾಗಲು, ಅವರು ಇರುಳು ಹಗಲೆನ್ನದೆ ಪ್ರಯತ್ನಿಸಿದರು. ಅದಕ್ಕೆ ತಕ್ಕ ಫಲವನ್ನೂ ಪಡೆದರು.

ಈಗ ರಷ್ಯದ ಸೋವಿಯೆಟ್ ಸರಕಾರದ ಅಧೀನದಲ್ಲಿ, ಸುಮಾರು ಎರಡು ಲಕ್ಷ ಹೆಂಗುಸರು ಬೇರೆ ಬೇರೆ ವಿಭಾಗಗಳಲ್ಲಿ ಕೆಲಸಮಾಡುವರು. ಅಲ್ಲಿನ ಸಭಾಸಮಿತಿಗಳಲ್ಲೂ, ಸ್ಟೇಟ್ ಫಾರ್ಮುಗಳಲ್ಲೂ ಅವರಿಗೆ ತುಂಬಾ ಅಧಿಕಾರವಿದೆ. ಆಲ್ ಯೂನಿಯನ್ ಸೆಂಟ್ರಲ್ ಎಕ್ಜೆಕ್ಯೂಟಿವ್ ಕಮಿಟಿ ಮತ್ತು ಆಲ್ ರಷ್ಯನ್ ಸೆಂಟ್ರಲ್ ಎಗ್ಜಿಕ್ಯೂಟಿವ್ ಕಮಿಟಿಗಳಲ್ಲಿ ಅವರಿಗೆ ಬೇಕಾದಷ್ಟು ಸ್ಥಳವಿದೆ. ಕಮ್ಯೂನಿಸ್ಟ್ ಪಾರ್ಟಿಯ ಸುಮಾರು ೩೦ ಲಕ್ಷ ಮಂದಿ ಸದಸ್ಯರಲ್ಲಿ ಆರು ಲಕ್ಷ ಮಂದಿ ಸ್ತ್ರೀ ಸದಸ್ಯೆಯರಿದ್ದಾರೆ. ಅಖಿಲ ರಷ್ಯೀಯ ಕೃಷಿ ಸಂಸ್ಥೆಯಲ್ಲಿ ಇಪ್ಪತ್ತೈದು ಸಾವಿರಕ್ಕೆ ಮಿಕ್ಕಿ ಸ್ತ್ರೀಯರಿದ್ದಾರೆ. ೧೯೩೩ರಲ್ಲಿ ರಷ್ಯದ ಕಾರ್ಖಾನೆಗಳಲ್ಲಿ ನಾಲ್ಕು ಲಕ್ಷದ ನಾಲ್ಕುಸಾವಿರದ ಇನ್ನೂರು ಮಂದಿ ಸ್ತ್ರೀ ಕೆಲಸಗಾರರಿದ್ದರು. ೧೯೩೫ಕ್ಕಾಗುವಾಗ ಈ ಸಂಖ್ಯೆಯು ಹದಿನೇಳು ಲಕ್ಷದ ಇಪ್ಪತ್ತು ನಾವಿರದ ಏಳು ನೂರಕ್ಕೇರಿತು. ಇದಲ್ಲದೆ ಮೆತಿನಗಿ, ಇಂಜಿನಿಯರಿಂಗ್, ಕೆಮಿಕಲ್, ಲೆಬರೆಟರಿ ಮೊದಲಾದ ಅನೇಕ ವಿಭಾಗಗಳಲ್ಲಿ ಉನ್ನತ ಅಧಿಕಾರಗಳಲ್ಲಿ ಹೆಂಗುಸರು ನಿಯೋಜಿತರಾಗಿದ್ದಾರೆ. ಮಜೂರ ಸ್ತ್ರೀಯರಿಗೆ ಬೇಕಾದಷ್ಟು ಶಾಲೆಗಳಿವೆ. ೧೯೩೨ರಲ್ಲಿ ೬೦ ಲಕ್ಷ ಅಶಿಕ್ಷಿತ ಸ್ತ್ರೀಯರು ಶಿಕ್ಷಣ ಹೊಂದಿದರು.

ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಸ್ತ್ರೀ ವಿಭಾಗದವರು ಸ್ತ್ರೀಯರ ಹಿತರಕ್ಷಣೆಗಾಗಿ ಕಷ್ಟಪಟ್ಟು ದುಡಿಯುತ್ತಿರುವರು. ಈ ವಿಭಾಗದಿಂದ ಹೆಂಗುಸರಿಗಾಗಿ ಎಷ್ಟೋ ವರ್ತಮಾನ ಪತ್ರಗಳು ಪ್ರಕಟವಾಗುತ್ತವೆ. ೧೯೩೩ರಲ್ಲಿ ಅಂತರರಾಷ್ಟ್ರೀಯ ಸ್ತ್ರೀ ದಿವಸದ ಇಪ್ಪತ್ತನೇ ಅಧಿವೇಶನವನ್ನು ನೆರವೇರಿಸಿದಾಗ ೧೨ ಮಂದಿ ಸ್ತ್ರೀಯರಿಗೆ "ಆರ್ಡರ್ ಆಫ್ ಇದೀನ್" ಎಂಬ ಶ್ರೇಷ್ಠ ಉಪಾಧಿಯನ್ನಿತ್ತರು. ಮತ್ತು ೧೭ ಮಂದಿ ಸ್ತ್ರೀಯರಿಗೆ "ಆರ್ಡರ್ ಆಫ್ ರೆಡ್ ಬೇನರ್ ಆಫ್ ಲೇಬರ್" ಎಂಬ ಉಪಾಧಿ ದೊರಕಿತು.

ರಷ್ಯಾದ ಸ್ತ್ರೀಯರಿಗೆ ಬೇರೆ ಬೇರೆ ವಿಷಯದಲ್ಲಿ ತಿಕ್ಷಣ ಕೊಡುವರಲ್ಲದೆ ಯುದ್ಧತಿಕ್ಷಣವನ್ನು ಕೂಡ ಕೊಡುವರು. ಅವರನ್ನು ಸೈನಿಕರನ್ನಾಗಿ ಮಾಡುವರು. ಅವರು ಪ್ರತಿ ವರ್ಷ ಅಲ್ಲಲ್ಲಿ ಸಂಚರಿಸಿ ತಿಬಿರ ಜೀವನವನ್ನು ಕಳೆಯಬೇಕಾಗುವುದು. ಇವೆಲ್ಲಾ ರಷ್ಯದ ಸ್ತ್ರೀಯರಿಗೆ ಸೋವಿಯೆಟ್ ಸರಕಾರದಿಂದ ಸಿಕ್ಕಿದ ಅಧಿಕಾರ ಸೌಕರ್ಯಗಳು.

ಬ್ರಿಟನ್ನಿಗಾಗಿ ಕಾದಿಟ್ಟ ಹಿಟ್ಲರನ ಗುಪ್ತಾಸ್ತ್ರ

ರೋಕೆಟ್‌ಗಳು

ಬ್ರಿಟನ್ನಿಗಾಗಿ, ತನ್ನಲ್ಲಿ ಮಹತ್ತಾದ ಗುಪ್ತಾಸ್ತ್ರವಿದೆಯೆಂದು ಕೊಚ್ಚಿಕೊಂಡ ಹಿಟ್ಲರನಲ್ಲಿ ಇರುವ ಆ ಗುಪ್ತಾಸ್ತ್ರವೇನು? ಅದೇನೆಂದು ಅಮೆರಿಕೆಯ ಲೇಖಕರೊಬ್ಬರು ಇದೀಗ ತಿಳಿಸಿದ್ದಾರೆ. ೨೪ ಅಂಗುಲ ವ್ಯಾಸದ ಕೋವಿಯಿಂದ ಹೊಡೆಯಬಹುದಾದ [illegible] ಗಾತ್ರದ ಗುಂಡುಗಳನ್ನು ರೋಕೆಟ್ ಮೂಲಕ ಹಾರಿಸಿ, ಇದುವರೆಗೆ ಎಂದೆಂದೂ ನಡೆಸಿರದ [illegible] ಕಾರ್ಯಗಳನ್ನು ನಡೆಸಬಹುದಂತೆ.

ಈ ರೋಕೆಟ್‌ಗಳಿಗೆ ಬೆಲೂನ್ [illegible] ಗಳು ಇದಿರಲ್ಲ. ಇದುವರೆಗೆ ಕಂಡು ಹಿಡಿ[illegible] ಲಾದ ವಿಮಾನಗಳಿಗಿಂತಲೂ, ಬೆಲೂನ್[illegible] ಗಿಂತಲೂ ಎತ್ತರಕ್ಕೆ ಇವು ಸರಿಯಬಲ್ಲವಷ್ಟೆ ಹಾರಬಲ್ಲವು. ಮಾತ್ರವಲ್ಲ, ಅವುಗಳ ಹಾರಾಟದ ಅಂತರ ಅಸಮಾನ!

ಜರ್ಮನಿಯ ಡಾ|| ಹೆನ್‌ರಿಚ್ ಜಂಗ್ ಎಂಬಾತನು ಈ ರೋಕೆಟ್‌ಗಳಿಗೆ ಬೇಕಾದ ಸಿಡಿಮದ್ದುಗಳ ಶೋಧ ನಡೆಸಿ, ಈ ಮದ್ದನ್ನು ಅಪ್ರಯೋಜಕವಾಗಿ ಮಾರ್ಪಡಿಸಬಲ್ಲ ಶಕ್ತಿಯೇ ಜಗತ್ತಿನಲ್ಲಿ ಇಲ್ಲವೆನ್ನುವಂತೆ ಎಸಗಿದ್ದಾನೆ.

ಉತ್ತರ ಸಮುದ್ರದ ಒಂದೆಡೆಯಿಂದ ಹಾರಿಸಲ್ಪಟ್ಟ ರೋಕೆಟ್ ಲಂಡನ್ ನಗರವನ್ನು ನಾಶಪಡಿಸಬಲ್ಲುದು. ಇದನ್ನು ಅದೆಂತಹ ಬಗೆಯ ಕೋವಿಯಿಂದಲೂ, ವೀರ ವೈಮಾನಿಕನಿಂದಲೂ ತಡೆಯಲು ಅಶಕ್ಯ. ಆಂತೂ ಹಿಟ್ಲರನ ಈ "ಇದೆ" ಎಂದು ಹೇಳಲಾದ "ಗುಪ್ತಾಸ್ತ್ರ" ಕೆಲ ದಿನಗಳಲ್ಲೇ ಬ್ರಿಟನ್ನನ್ನು ಹುಡಿಗೂಡಬಲ್ಲುದು. ಆದರೂ ಬ್ರಿಟಿಷರು ಇದಕ್ಕೂ ಉತ್ತರವೀಯಲು ಸಿದ್ಧರೇ.

ರಾಜಾ ಕಳ್ಳರು

ಮುತ್ತಾದಲ್ಲಿನ ಹೆಡ್ ಪೋಸ್ಟಾಫೀಸಿಗೆ ಎರಡು ವಿಚಿತ್ರ ಪತ್ರಗಳು ತಲಪಿದುವು. ಆದರಲ್ಲಿ ಇಂತಹ ದಿನ ತಾವು ಪೋಸ್ಟಾಫೀಸನ್ನು ನುಗ್ಗುವೆವೆಂದೂ, ನಮ್ಮಂತಹ ದರೋಡೆಗಾರರಿಗೆ ಯೋಗ್ಯರಾದ, ಪೋಲೀಸರ ಬಲವಾದ ಕಾವಲನ್ನು ನಡೆಸಬಹುದೆಂದೂ ಬರೆದಿತ್ತು. ಸರಿ! ನಿರ್ದಿಷ್ಟವಾದ ದಿನ ಪೋಲೀಸರು ಪೋಸ್ಟಾಫೀಸಿಗೆ ಬಲವಾದ ಕಾವಲು ನಡೆಸಿದರು. ಯಾರೂ ಆ ಕಡೆ ಸುಳಿಯಲಿಲ್ಲ. ಆದರೆ, ಅದೇ ರಾತ್ರಿ, ಪೋಸ್ಟಾಫೀಸಿನ ಬಳಿಯಲ್ಲೇ ಇದ್ದ ಅಲ್ಲಿನ ಡಾಕ್ಟರರ ಮನೆಗೆ ಕಳ್ಳರು ನುಗ್ಗಿ, ಸುಮಾರು ೨ ಸಾವಿರ ರೂಪಾಯಿಗಳ ಆಭರಣ ಇತ್ಯಾದಿಗಳನ್ನು ಕದ್ದರು. ಈ ಕಳ್ಳರನ್ನು ಕಂಡೇ, ಡಾಕ್ಟರರ ಮನೆಯ ಆಳು ಹೆದರಿ, ಬೊಬ್ಬೆ ಹಾಕದೆ ಸುಮ್ಮನೆ ಕುಳಿತುಕೊಂಡ! ಪೋಸ್ಟಾಫೀಸಿನ ಕಾವಲು ನಡೆಸುತ್ತಿದ್ದ ಮಹಾವೀರರಿಗೂ ಇದು ತಿಳಿಯಲಿಲ್ಲ!

ಟರ್ಕಿ – ರಷ್ಯಗಳೊಳಗೆ ಮನಸ್ತಾಪವಿದೆಯೇ?

ಗೊಂದಲ ಹಬ್ಬಿಸಲು ಜರ್ಮನಿಯ ಹಂಚಿಕೆ

ರಷ್ಯವು, ಡಾರ್ಡನೆಲ್ಲಸ್ ಪ್ರಾಂತ್ಯವನ್ನು ತನ್ನ ಅಧಿಕಾರಕ್ಕೆ ಒಪ್ಪಿಸಬೇಕೆಂದೂ ಟರ್ಕಿಗೆ ತಿಳಿಸಿದೆ–ಎಂಬ ಒಂದು ಸುದ್ದಿ ಪ್ರಕಟವಾಗಿದೆ. ಈಗ ವಿಚಾರಿಸಿ ನೋಡುವಾಗ, ರಷ್ಯ ಮತ್ತು ಟರ್ಕಿಗಳೊಳಗೆ ಕಾದಾಟ ಹಚ್ಚಲು ಜರ್ಮನಿಯೇ ಆಡಿದ ಆಟವಿದಿರಬೇಕೆಂದು ಗೊತ್ತಾಗಿದೆ. ಕಾರಣ, ಟರ್ಕಿ ಮತ್ತು ರಷ್ಯಗಳೊಳಗೆ ವೈಮನಸ್ಸು ಉಂಟಾದೊಡನೆ, ರಷ್ಯ ಮತ್ತು ಬ್ರಿಟನ್‌ಗಳೊಡನಿದ್ದ ಮೈತ್ರಿ ಅಳಿಯಬಹುದೆಂದು ಜರ್ಮನಿಯ ಯೋಚನೆ.

ರಷ್ಯ ಮತ್ತು ಜರ್ಮನಿಗಳೊಳಗೆ ಕಾದಾಟವಾಗಬಹುದೆಂದು ನೆನಸಿ, ಅದಕ್ಕಾಗಿ ಹಗಲಿರುಳೂ ಶ್ರಮಿಸಿದ ಸಾಮ್ರಾಜ್ಯಶಾಹಿಗಳ ಆಟವನ್ನೇ ಮಣ್ಣುಗೂಡಿಸಿದ ರಷ್ಯ ಇದಕ್ಕೆಲ್ಲ ಒಳಗಾಗದು. ಮಾತ್ರವಲ್ಲ, ರಷ್ಯದ ಮೇಲೆಯೇ ಜರ್ಮನಿ ಬೇಗನೆ ತಿರುಗಲೂ ಬಹುದೆಂಬ ಸಂಶಯ ರಷ್ಯನರಲ್ಲಿ ಬಲವಾಗಿದೆ.

ಬ್ರಿಟನನ್ನು ಹೊಡೆದಿಕ್ಕುವದರಲ್ಲಿ ಜರ್ಮನಿಯಶಸ್ವಿಯಾದರೆ ಮುಂದೆ ಅದು ಹಿಂದೆ ತಿರುಗಿ, ರಷ್ಯದ ಮೇಲೆ ಕೈ ಮಾಡದಿರದು. ಅಷ್ಟೇ ಅಲ್ಲ, ಬ್ರಿಟನ್ನಿನಿಂದ ಸೋಲಿಸಲ್ಪಟ್ಟರೂ ಜರ್ಮನಿ ರಷ್ಯದ ಕಡೆಯೇ ತನ್ನ ಕರ್ತವ್ಯವೆಂದು ತಿಳಿದು ತಿರುಗಬಹುದು. ಆದುದರಿಂದ ಇದೀಗ ರಷ್ಯಕ್ಕೆ ಉಂಟಾದ ಸಂಶಯದ ಲಾಭವನ್ನು ಬ್ರಿಟನ್ನು ಪಡೆಯುವುದು ಇಕ್ಕಡೆಗೂ ಲಾಭ

ರಷ್ಯವು ಒಂದೆಡೆಯಿಂದ ಜರ್ಮನಿಯ ಕಡೆಗೂ ಇನ್ನೊಂದೆಡೆಯಿಂದ ಜಪಾನಿನ ಕಡೆಗೂ ದೃಷ್ಟಿ ಇರಿಸಿಕೊಂಡಿದೆ. ಅದೇ – ಬ್ರಿಟನ್ನು ಪೂರ್ವದಿಕ್ಕಿನಲ್ಲಿ ಜಪಾನಿನ ಸೊಂಟ ಮುರಿವ ಭರವಸೆ ಕೊಟ್ಟರೆ, ರಷ್ಯವು ಜರ್ಮನಿಗೆ ಸಹಾಯ ಒದಗಿಸುವದನ್ನು ನಿಲ್ಲಿಸಬಹುದು ಮಾತ್ರವಲ್ಲ, ಬ್ರಿಟನ್ನಿನ ಶಕ್ತಿಯನ್ನು ಇಮ್ಮಡಿ ಹೆಚ್ಚಿಸಬಲ್ಲುದು. ಆಗ ಟರ್ಕಿ–ರಷ್ಯ–ಬ್ರಿಟನ್ನುಗಳು ಸರ್ವಾಧಿಕಾರಿಗಳ ಹುಚ್ಚನ್ನು ಅಳಿಸಬಹುದು.

ಅಜೀರ್ಣ

ಇನ್ನು ಮುಂದೆ ಅದರ ಬಾಧೆ ಇರಲಾರದು.

ಊಟಕ್ಕೆ ಮುಂಚೆ ಮತ್ತು ಅನಂತರ ಒಂದೊಂದು 'ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್' ಸೇವಿಸಿರಿ.

ಪ್ರತಿ ದಿನವೂ ನಿಮ್ಮ ಪಿತ್ತಕೋಶವು ಎರಡು ಪೈಂಟು ಪಿತ್ತರಸವನ್ನು ನಿಮ್ಮ ಕರುಳಿಗೆ ಸುರಿಯಬೇಕು. ಈ ರಸವು ಚೆನ್ನಾಗಿ ಹರಿಯದಿದ್ದರೆ ಆಹಾರವು ಜೀರ್ಣವಾಗುವುದಿಲ್ಲ. ಅದು ಕರುಳಿನಲ್ಲಿಯೇ ಕೊಳೆಯುತ್ತದೆ. ವಾಯು ತುಂಬಿ ನಿಮ್ಮ ಹೊಟ್ಟೆಯು ಊದುತ್ತದೆ. ಆಗ ನಿಮಗೆ ಮಲಬದ್ಧತೆಯಾಗುತ್ತದೆ. ನಿಮ್ಮ ಇಡೀ ಪ್ರಕೃತಿಯು ವಿಷಮಯವಾಗಿ, ನಿರುತ್ಸಾಹವೂ, ನಿಶ್ಶಕ್ತಿಯೂ ಉಂಟಾಗಿ, ಪ್ರಪಂಚವೇ ನಿಮಗೆ ಬೇಸರಿಕೆಯನ್ನುಂಟುಮಾಡುತ್ತದೆ.

ಒಮ್ಮೆ ಭೇದಿಯಾದ ಮಾತ್ರಕ್ಕೆ ಈ ರೋಗವು ಸಮೂಲ ನಾಶವಾಗುವುದಿಲ್ಲ. ಕಾರ್ಟರ್ಸ್ ಲಿಟ್ಲ್ ಲಿವರ್ ಪಿಲ್ಸ್ ಮಾತ್ರ ನಿಮ್ಮ ಕರುಳಿಗೆ ಎರಡು ಪೈಂಟ್ ಪಿತ್ತರಸವನ್ನು ಸಲೀಸಾಗಿ ಸುರಿಸಿ, ನೀವು ಸದಾ ಆನಂದೋತ್ಸಾಹದಲ್ಲಿರುವಂತೆ ಮಾಡುವುದು. ಈ ಮಾತ್ರೆಗಳು ನಿರಪಾಯಕರ ಮತ್ತು ಸೌಮ್ಯವಾಗಿದ್ದರೂ, ಪಿತ್ತರಸವನ್ನು ಸಲೀಸಾಗಿ ಸಾಗಿಸುವುದು ಆಶ್ಚರ್ಯಕರವಾಗಿದೆ. ಕೆಂಪು ಪೊಟ್ಟಣದ ಮೇಲೆ 'ಕಾರ್ಟರ್ಸ್ ಲಿಟ್ಲ್ ಲಿವರ್ ಪಿಲ್ಸ್' ಎಂಬ ಹೆಸರಿದ್ದರೆ ಮಾತ್ರ ಕೊಂಡುಕೊಳ್ಳಿರಿ. ಮಿಕ್ಕವುಗಳನ್ನು ತಿರಸ್ಕರಿಸಿರಿ. ಬೆಲೆ ಆಣೆ ೧೦. ೫೦೧

PANDIT BANK,
MANGALORE.

ಪಂಡಿತ್ ಬೇಂಕ್,

ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತುಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯೆಬಿಲಿಟಿಯದು ಆಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½%
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½%

PANDIT SHIVA RAO, B.A., LL.B.,
PROPRIETOR.
PANDIT SANJIVA RAO, B.A.
AGENT.

For Registration of Patents, Designs and Trade Marks, write to:

C. G. ANUND & CO.,
Patent & Trade Mark Attorneys,
14, Hare Street, CALCUTTA.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆ ಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕೆ ದೊಂದು ಸಂಜೀವಿನಿ.

ಬಳಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

K.A 2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನನುಭವಿಸುವಂತೆ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಚೈನಾ ಬಜಾರ್, ಮದ್ರಾಸ್.

ವಿದೇಶ

ಅಬಿಸೀನಿಯ ಗಡಿ

ಇಟೆಲಿಯು ಯುದ್ಧವನ್ನು ಹೂಡಿದಂದಿನಿಂದ, ಅಬಿಸೀನಿಯ ಮತ್ತು ಎರಿಟ್ರಿಯಾ ಗಡಿಗಳಲ್ಲಿ ಸದಾ ಕಾದಾಟ ನಡೆದೇ ಇದ್ದಿತೆಂದು ತಿಳಿದು ಬಂದಿದೆ.

ಮಾಯಾಲೆಯನ್ನು ಬಿಟ್ಟೆವು

"ಕಳೆದ ೫ ದಿನಗಳಿಂದ ವೈರಿಗಳಿಂದ ಸುತ್ತಿ-ಮುತ್ತಲ್ಪಟ್ಟಿದ್ದ, ಮಾಯಾಲೆಯಲ್ಲಿನ ನಮ್ಮ ಸೇನೆ ಅಲ್ಲಿಂದ ಅಪಾಯವಿಲ್ಲದಂತೆ ಹಿಂದಕ್ಕೆ ತರಿಸಿ ಕೊಳ್ಳಲ್ಪಟ್ಟಿದೆ" ಎಂದು ಬ್ರಿಟಿಷ್ ಸರಕಾರ ತಿಳಿಸಿದೆ.

ಉಧಾಮ್ ಸಿಂಗ್

ಒ'ಡ್ವಯರ್‌ನ ಕೊಲೆಯ ನಿಮಿತ್ತ ಮರಣ ದಂಡನೆಗೆ ಗುರಿಪಡಿಸಲ್ಪಟ್ಟ ಉಧಾಮ್‌ಸಿಂಗನ ಮೇಲಿನ ದಾವೆ, ಅಪೀಲು ಕೋರ್ಟಿನಲ್ಲಿ ತೆಗೆದು ಹಾಕಲ್ಪಟ್ಟಿತು. ಮರಣದಂಡನೆ ನಡೆಯಬೇಕೆಂದಾಗಿದೆ.

ಬ್ರಿಟಿಷ್ ಸಾಹಸ

ಬ್ರಿಟಿಷ್ ಆರ್. ಎ. ಯಫ್. ವಿಮಾನಗಳು ರಾತ್ರಿ ಕಾಲದಲ್ಲಿ ಜರ್ಮನಿಯ ಹಾಗೂ ಹೋಲೆಂಡುಗಳ ವಾಯವ್ಯ ಭಾಗಗಳಲ್ಲಿ ಹಾರಾಡಿ ಬಾಂಬುಗಳನ್ನು ಸುರಿಸಿ, ವೈರಿಗಳ ೨೨ ವಿಮಾನ ನಿಲ್ದಾಣಗಳನ್ನು ನಾಶಪಡಿಸಿವೆಯೆಂದೂ, ಜರ್ಮನರ ಕಾದಾಟದ ಶಕ್ತಿ ಅಳಿಸಿವೆಯೆಂದೂ ಹೇಳಲಾಗಿದೆ.

ವಿಮಾನ ದಾಳಿ

ನಿತ್ಯದಂತೆ ಜರ್ಮನ್ ವಿಮಾನಗಳು ಇಂಗ್ಲಾಂಡಿನ ಪೂರ್ವ-ದಕ್ಷಿಣ-ಭಾಗಗಳ ಮೇಲೆ ಹಾರಾಡಿ ಬಾಂಬುಗಳನ್ನು ಸಾಕಷ್ಟು ಸುರಿಸಿ ಹಿಂದಕ್ಕೆ ಓಡುತ್ತಲೇ ಇವೆ.

ಮದ್ದುಗುಂಡುಗಳು

ಬ್ರಿಟನ್, ಇಂಡಿಯಾ, ನ್ಯೂಜೀಲ್ಯಾಂಡ್ ಮುಂತಾದೆಡೆಗಳಿಂದ ಸುಮಾರು ೬೬೬ ಸಾವಿರ ಪವನುಗಳ ಮದ್ದುಗುಂಡುಗಳಿಗೆ ಆಸ್ಟ್ರೇಲಿಯಕ್ಕೆ "ಆರ್ಡರು" ಬಂದಿರುವುದಾಗಿ ತಿಳಿದುಬಂದಿದೆ.

ಅಮೇರಿಕದ ರಾಯಭಾರಿಗಳು

ಜರ್ಮನಿಯು ವಶಪಡಿಸಿಕೊಂಡ ರಾಷ್ಟ್ರಗಳಲ್ಲಿನ ಅಮೇರಿಕದ ರಾಯಭಾರಿಗಳನ್ನೂ ಅಮೇರಿಕೆಯು ಹಿಂದಕ್ಕೆ ಕರೆಸಿಕೊಳ್ಳಲಿರುವುದು.

ಜರ್ಮನಿಗೆ ಇಟೆಲಿಯಾನರು

ಜರ್ಮನಿ ಹಾಗೂ ಇಟೆಲಿಯಾನ ಲೇಬರ್ ಅಧಿಕಾರಿಗಳೊಳಗೆ ನಡೆದ ತಹದ ಪ್ರಕಾರ ೨೦ ಸಾವಿರ ಇಟೆಲಿಯಾನ್ ಕೆಲಸಗಾರರು ಜರ್ಮನಿಗೆ ಹೋಗಲಿರುವರಂತೆ. ಇವರಲ್ಲಿ ೭೦೦ ಮಂದಿ ಇದೀಗ ಹೋಗಿದ್ದಾರೆ.

ಲಕ್ಸೆಂಬರ್ಗ್ ರಾಣಿಯ ಗಂಡ

ಲಕ್ಸೆಂಬರ್ಗ್‌ನ ರಾಣಿಯ ಗಂಡನಾದ ಪ್ರಿನ್ಸ್ ಫೆಲಿಕ್ಸ್ ಇದೀಗ ಲಿಸ್‌ಬನ್‌ನಿಂದ ಅಮೇರಿಕೆಗೆ ಹೊರಟುಹೋಗಿದ್ದಾನೆ. ಲಕ್ಸೆಂಬರ್ಗ್ ರಾಣಿರಾಜ್ಯ. ಆ ರಾಣಿ ಈಗ ಅಮೇರಿಕೆಯಲ್ಲೇ ಇದ್ದಾಳೆ!

೬೦೦೦ ಟ್ಯಾಂಕುಗಳು

೪೫ ಮತ್ತು ೫೦ ಮಿಲಿಮಿಟರ್ ಕೋವಿಗಳನ್ನೊಳಗೊಂಡ ಆರು ಸಾವಿರ ಟ್ಯಾಂಕುಗಳಿಗೆ ಅಮೇರಿಕೆಯ ಸರಕಾರ ಆರ್ಡರು ಕೊಟ್ಟಿದೆ. ಇವುಗಳ ಬೆಲೆ ೧೧ ಮಿಲಿಯ ಡಾಲರುಗಳು.

ಪೈ—ಸ್ಟಾಂಪ್

ಒಂದು ಪೈ ಬೆಲೆಯ ಟಪ್ಪಾಲು ಚೀಟಿಯನ್ನು ಬರ್ಮಾ ಸರಕಾರವು ಅಗೋಸ್ತು ೧೬ರಿಂದ ಹೊರಡಿಸಲಿದೆ.

ಭೀಕರ ಕಾಳಗ

ಬ್ರಿಟಿಷ್ ಚೆನಾಲ್ ಪ್ರದೇಶದಲ್ಲಿ ಭೀಕರ ವಿಮಾನ ಕಾದಾಟವೊಂದು ನಡೆಯಿತು. ಜರ್ಮನರ ೧೦ ವಿಮಾನಗಳು ನಾಶವಾಗಿವೆಯೆಂದು ಬ್ರಿಟನ್ ಹೇಳಿದೆ.

ಮೂವರು ಒಂದಾಗುವರೇ?

ಜರ್ಮನಿ, ಇಟೆಲಿ ಮತ್ತು ಜಪಾನುಗಳು ಒಂದಾಗಬೇಕೆಂದೂ, ಹಾಗೆ ಮಾಡಿದರೆ ಜಪಾನು ಪೂರ್ವ ಆಸ್ಯದಲ್ಲಿ ತನ್ನ ಸಾಹಸ ಸಾಗಿಸಬಹುದೆಂದೂ, ಜಪಾನು ರಷ್ಯದೊಡನೆ ಇರುವ ಸಂಬಂಧ ಬಲಪಡಿಸಬೇಕೆಂದೂ ಮುಂತಾಗಿ 'ನಿಚಿ ನಿಚಿ ತಿಂಬುನ್' ಎಂಬ ಜಪಾನಿ ಪತ್ರಿಕೆ ಹೇಳಿದೆ.

ರಷ್ಯ

ಇನ್ನೊಂದು ಪಂಚವಾರ್ಷಿಕ ಯೋಜನೆಗಾಗಿ ರಷ್ಯ ಸರಕಾರವು ಜನತೆಯಿಂದ ಕೇಳಿದ ಸಾಲವಾದ ೮ ಮಿಲಿಯ ರೋಬಲ್‌ಗಳ ಬದಲು ಬರೇ ೧೧ ದಿನಗಳೊಳಗೆ, ಬೇಕಾದುದಕ್ಕಿಂತ ಒಂದು ಮಿಲಿಯದ ೬೦ ಸಾವಿರ ರೋಬಲ್ ಹೆಚ್ಚೇ ಸಂಗ್ರಹವಾಗಿದೆ.

ಹಾಂಗ್ ಚೌ

ಈ ಕೊಲ್ಲಿಯಲ್ಲಿ ಜಪಾನೀ ಹಡಗುಪಡೆ ಯುದ್ಧ ನಡೆಸುತ್ತಿದೆ. ಹಲವು ದ್ವೀಪಗಳನ್ನು ಆದಾಗಲೇ ಆಕ್ರಮಿಸಿ ವಶಪಡಿಸಿಕೊಂಡಿದೆ. ಚಿಕಂಗ್ ಮತ್ತು ಪೂಕೀನ್ ಬಂದರುಗಳನ್ನು ಜಪಾನು ಮುಚ್ಚಿದ್ದರಿಂದ ಇಲ್ಲಿದ್ದ ಪರರಾಷ್ಟ್ರದ ಹಡಗುಗಳು ಹೊರಡದಾಗಿವೆ.

ಹೊಸ ಬಿಲ್ಲು

ಯುದ್ಧ ಕಾಲದಲ್ಲಿ, ದೇಶದ್ರೋಹಾತ್ಮಕ ಕಾರ್ಯವನ್ನು ನಡೆಸಬಹುದಾನವರ ವಿಚಾರದಲ್ಲಿ, ಕೂಡಲೇ ತಕ್ಕ ಶಾಸನ ಹೊರಿಸುವದಕ್ಕಾಗಿ, ಅಗತ್ಯವುಳ್ಳ ವ್ಯವಸ್ಥೆ ಹಾಗೂ ಅಧಿಕಾರಗಳನ್ನು ಸ್ಥಾಪಿಸುವ ಬಿಲ್ಲೊಂದು ಬ್ರಿಟಿಷ್ ಪಾರ್ಲಿಮೆಂಟನಲ್ಲಿ ತರಲ್ಪಟ್ಟಿದೆ.

ಸ್ವೀಡನ್

ಸ್ವೀಡನ್‌ನ ಮೂಲಕ ಜರ್ಮನ್ ಸೈನಿಕರೂ, ಯುದ್ಧ ಸಾಮಗ್ರಿಗಳೂ ನಾರ್ವೆಗೆ ಹೋಗುತ್ತಿರುವ ವಿಚಾರದಲ್ಲಿ, ಬ್ರಿಟಿಷ್ ಸರಕಾರವು ವಿರೋಧವನ್ನು ಸೂಚಿಸಿ, ಸ್ವೀಡನ್ನಿನ ಈ ಕಾರ್ಯ ತಾಟಸ್ಥ್ಯ ಧೋರಣೆಗೆ ವಿರುದ್ಧವಾದುದು ಎಂದು ಎಚ್ಚರಿಕೆ ಕೊಟ್ಟಿದೆ.

ಬರ್ಮಾ ದಾರಿ

ಬರ್ಮಾ ಮಾರ್ಗದ ಮೂಲಕ ಚೀನಕ್ಕೆ ಹೋಗುವ ಶಸ್ತ್ರಾಸ್ತ್ರವೇ ಮುಂತಾದುವನ್ನು ತಡೆದ ಬ್ರಿಟನ್ನಿನ ಧೋರಣೆ, ಜಗತ್ತಿನ ಶಾಂತಿಗೆ ವಿರುದ್ಧವಾದುದೆಂದು ಅಮೇರಿಕೆಯ ಸ್ಟೇಟ್ ಸೆಕ್ರೆಟರಿಗಳು ತಿಳಿಸಿದ್ದಾರೆ.

ಚೀನದ ವಿರೋಧ

"ಚೀನಕ್ಕೆ ಜೀವನಾಧಾರದಂತಹ ದಾರಿಯನ್ನು ತಡೆದು ಬ್ರಿಟನ್ನು ತನ್ನ ಆಶ್ವಾಸನವನ್ನೇ ಮುರಿದಂತಾಗಿದೆ. ಲೀಗ್ ಸದಸ್ಯನಾಗಿ ಬ್ರಿಟನ್ ಕೊಟ್ಟ ಭರವಸೆಗೂ ವಿರುದ್ಧವಾಗಿದೆ. ಚೀನದ ಶಾಂತಿಗೆ ವಿರುದ್ಧವಾದ ವರ್ತನೆಯನ್ನು ಬ್ರಿಟನ್ನು ಕೈಕೊಳ್ಳದೆಂದು ನಂಬುಗೆ" ಎಂದು ಲಂಡನಿನ ಚೀನಾ ರಾಯಭಾರಿ ತಿಳಿಸಿದ್ದಾನೆ.

ಬಾಲ್ಕನ್

ರುಮೇನಿಯ, ಬಲ್ಗೇರಿಯಾ ಮತ್ತು ಹಂಗೇರಿಗಳು ತಮ್ಮ ವಲಸೆ ಸಮಸ್ಯೆಯನ್ನು ಜರ್ಮನಿಯ ಸಹಕಾರದಿಂದ ತಾವಾಗಿಯೇ ಬಗೆಹರಿಸಿಕೊಳ್ಳಬೇಕೆಂದು ಜರ್ಮನಿ ತಿಳಿಸಿದೆ. ರುಮೇನಿಯದಲ್ಲಿನ ೮ ಲಕ್ಷ ಜರ್ಮನರನ್ನು ಟ್ರಾನ್ಸಿಲ್ವೇನಿಯ ಪ್ರಾಂತ್ಯಕ್ಕೆ ಸರಿಯಿಸಿ ಅದನ್ನು ಸ್ವತಂತ್ರವಾಗಿ ಮಾಡುವ ಯೋಜನೆಯೂ ಜರ್ಮನಿಗೆ ಇದೆಯಂತೆ!

ಬ್ರಿಟಿಷ್ ಹಸುಳೆಗಳು

ಬ್ರಿಟಿಷ್ ಸಾಮ್ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಅಮೇರಿಕೆಯಿಂದ ಸ್ವಾಗತವಿದ್ದರೂ, ಬ್ರಿಟಿಷ್ ಸರಕಾರವು, ಬ್ರಿಟನಿನಲ್ಲಿದ್ದ ಮಕ್ಕಳನ್ನು ಕಳುಹಿಸದಿರಲು, ಅವುಗಳಿಗೆ ಅಪಾಯ ಒದಗದಂತೆ ರವಾನಿಸುವುದು ಕಷ್ಟವೂ, ಬೇಕಾದ ಹಡಗುಗಳು ಕಡಿಮೆಯಾದುದೂ ಕಾರಣವಂತೆ.

ಕ್ಯೂಬಾ

ಇಲ್ಲಿನ ಅಧ್ಯಕ್ಷನಾಗಿ ಕರ್ನಲ್ ಬಟಿಸ್ಟಾ ಆರಿಸಲ್ಪಟ್ಟಿದ್ದಾನೆ.

ಲಿಥುವೇನಿಯ

ಇಲ್ಲಿನ ಪಾರ್ಲಿಮೆಂಟನಲ್ಲಿ ಶೇಕಡಾ ೯೦ಕ್ಕೂ ಹೆಚ್ಚಿನ ಮತದಾರರು ರಷ್ಯದ ಮೇಲೆ ಸಹಾನುಭೂತಿಯುಳ್ಳವರ ಚುನಾವಣೆಯಾಗಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಶಾಂಘಾಯಿಯಲ್ಲಿ

ಭೀಕರ ಅತ್ಯಾಚಾರ ಆರಂಭವಾಗಿದೆ. ಚೀನೀ ದೇಶದ್ರೋಹಿ ವಾಂಗ್ ಚಿಂಗ್‌ವೀಯ, ನಾನ್‌ಕಿಂಗ್ ಸರಕಾರವು, ಚೀನೀಯರಲ್ಲಿ ಸಹಾನುಭೂತಿಯಿರಿಸುವವರನ್ನು ಅಪಹರಿಸಿ, ಕೊಂದು, ಬೆನ್ನಟ್ಟಿ, ಪೀಡಿಸುತ್ತಿದೆ. ಶಂಪೋ ಎಂಬ ಅಮೇರಿಕನನ ಅಂಕೆಯ ಒಂದು ಪತ್ರಿಕಾ ಕಚೇರಿಗೆ ಬಾಂಬು ಒಗೆಯಲಾಗಿ ೧೯ ಮಂದಿ

ಗಾಯಗೊಂಡಿದ್ದಾರೆ. ಈ ಪತ್ರಿಕೆಯ ಒಡೆಯನನ್ನು ಓಡಿಸಬೇಕೆಂದು ಹಿಂದೆ ನಾನ್‌ಕಿಂಗ್ ಸರಕಾರ ಸೂಚಿಸಿತ್ತು. ಇಲ್ಲಿನ ಅಂತರರಾಷ್ಟ್ರೀಯ ಪ್ರಜೆಗಳು ಭಯಗ್ರಸ್ತರಾಗಿದ್ದಾರೆ.

ರೂಸ್‌ವೆಲ್ಟರು

ಅಮೇರಿಕೆಯ ಅಧ್ಯಕ್ಷ ಪದವಿಯು ಮೂರನೆಯ ಬಾರಿಗೆ, ಮಿ! ರೂಸ್‌ವೆಲ್ಟರಿಗೇ ದೊರೆಯುವುದೆಂದು ತಿಳಿದುಬಂದಿದೆ! ರಾಷ್ಟ್ರದ ಹೆಚ್ಚಿನ ಸದಸ್ಯರು ಇವರನ್ನೇ ಆರಿಸಲೆಳಸಿದ್ದಾರೆ. ಕೆಲವರು ಮಿ! ರೂಜ್‌ವೆಲ್ಟರಿಗೆ ಶೇಕಡಾ ಅಂಥರಷ್ಟು ಮತಗಳು ದೊರೆಯಬಹುದೆಂದು ಅಂದಾಜು ಮಾಡಿದ್ದಾರೆ.

ಫ್ರೆಂಚರ ಹಣ

ಫ್ರಾನ್ಸು ಶರಣಾಗತವಾದೊಡನೆ, ಬ್ರಿಟಿಷ್ ಟ್ಯಾಂಕುಗಳಲ್ಲಿದ್ದ ಫ್ರೆಂಚರ ಹಾಗೂ ಫ್ರೆಂಚ್ ಸರಕಾರದ ಹಣಗಳನ್ನು ಕೊಡಬಾರದೆಂದು ಬ್ರಿಟಿಷ್ ಸರಕಾರ ತಿಳಿಸಿತ್ತೆಂದು ಗೊತ್ತಾಗಿದೆ. ಇದರಿಂದ ಜರ್ಮನಿಗೆ ಫ್ರೆಂಚರ ಈ ಹಣ ಸಿಕ್ಕದಾಗಿದೆ!

ರಾಯಭಾರಿಗಳ ಅವಸ್ಥೆ

ಜರ್ಮನಿಯಿಂದ ಸ್ವಾಧೀನಪಡಿಸಿಕೊಳ್ಳಲ್ಪಟ್ಟ ರಾಷ್ಟ್ರಗಳಲ್ಲಿರುವ ತಾಟಸ್ಥ್ಯ ರಾಷ್ಟ್ರಗಳ ರಾಯಭಾರಿಗಳ ಅವಸ್ಥೆ ಕಠಿನವಾಗಿದೆ. ಇವರಿಗೆ ಕಾಗದ ಪತ್ರಗಳೂ, ಪತ್ರಿಕೆಗಳೂ, ಸಂಬಂಧಿಕರಿಂದ ಪಾರ್ಸೆಲುಗಳೂ, ಅಂತೂ ಏನೇನೂ ಬರುವುದೇ ಇಲ್ಲವಂತೆ. ಬಂದುದೆಲ್ಲ ಜರ್ಮನರ ವಶವಾಗುತ್ತಿದೆ. ಅಂತೂ ಇವರು ತಮ್ಮ ದೇಶದ ಹಾಗೂ ಹೊರ ಜಗತ್ತಿನ ಸಂಬಂಧವೇ ಇಲ್ಲದೆ ಕಾರ್ಯ ನಿರ್ವಹಿಸಬೇಕಾಗಿರುವುದಂತೆ.

ಬ್ರಿಟಿಷ್ ಹಡಗುಪಡೆ

ಭೂಮಧ್ಯ ಸಮುದ್ರದಲ್ಲಿರುವ ಬ್ರಿಟಿಷ್ ಹಡಗುಪಡೆ ಹಾಗೂ ಅದರ ಸೈನಿಕರು ತಮ್ಮ ಕೈಬಲವನ್ನು ಇಟೆಲಿಯಾನರಿಗೆ ತೋರಲು ಹಾತೊರೆಯುತ್ತಿದ್ದಾರೆ. ಇಟೆಲಿಯು ತನ್ನ ಹಡಗುಗಳನ್ನು ಬಂದರುಗಳಿಗೆ ಸಾಗಿಸಿ, ವಿಮಾನ ದಾಳಿಯ ಮೂಲಕ ಬ್ರಿಟಿಷ್ ಹಡಗುಗಳನ್ನು ಹಾಳುಗೆಡಹಲು ಯತ್ನಿಸಿದರೂ ಕೃತಕೃತ್ಯವಾಗಿಲ್ಲವಂತೆ.

ಮೈಸೂರು
ಸಾಬೂನು
ಇಪ್ಪತ್ತು ವರ್ಷದ ತಯಾರಿಕೆ ಅನುಭವ
ನೈಮರ್ಲ್ಯವು
ಒಳ್ಳೆ
ಅಭ್ಯಾಸದ ಪರಿಣಾಮ
ನಿಮ್ಮ ಮೈ ಮತ್ತು ಬಟ್ಟೆಗಳನ್ನು
ಶುಚಿ ಮಾಡಲು
ಮೈಸೂರು
ಸಾಬೂನುಗಳು ಕಾದಿವೆ.
ಮೈಸೂರು ಸಾಬೂನುಗಳು ಸರಕಾರದ
ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ
ಬೆಂಗಳೂರಿನಲ್ಲೇ ತಯಾರಾಗುತ್ತಿವೆ.

ಮೈಸೂರು
ಸ್ಯಾಂಡಲ್ ಸೋಪ್

ಬೆನ್ನು ನೋವಿನಿಂದ ಹಲವು ವಾರಗಳ ತನಕ ಹಾಸಿಗೆಯಲ್ಲೇ

"ಭಯಂಕರ ನೋವಿನಿಂದ" ಬಲ ಕ್ಷಯವಾಯಿತು.

ಅವಳ ತಾಯಿಯು ಬುದ್ಧಿವಾದವು, ಬೆನ್ನು ನೋವಿಗಾಗಿ ಅವಳನ್ನು ಕ್ರುಶ್ಮನ್ ಸಾಲ್ಟ್ ಸೇವಿಸುವಂತೆ ಮಾಡಿತು. ಮತ್ತು ಇವಳು ಪ್ರಥಮ ಬಾಟ್ಲಿಯನ್ನು ಮುಗಿಸುವುದರೊಳಗಾಗಿ, ಸುಖದ ಭಾವನೆಯನ್ನು ಕಂಡಳು. ಅವಳು ಬರೆಯುವ ಕಾಗದ ಹೀಗಿದೆ:

"ಕಳೆದ ವರ್ಷ ಸಾಧಾರಣ ಈ ಸಮಯದಲ್ಲಿ ನನ್ನ ಬೆನ್ನಿನಲ್ಲಿ ಭಯಂಕರ ನೋವಿದ್ದು ಮೂರು ವಾರಗಳ ತನಕ ಮಲಗಿದಲ್ಲೇ ನನಗೆ ಹಾಸಿಗೆಯಿಂದೇಳಲೂ ಆಗುತ್ತಿದ್ದಿಲ್ಲ. ಖ್ಯಾತಿವೆತ್ತ ಹಲವಾರು ಚಿಕಿತ್ಸೆ ನಡೆಸಿದೆನು; ಆದರೆ ಪ್ರಯೋಜನವಾಗಿಲ್ಲ. ಆದು ನಂತರ ನನ್ನ ಕಷ್ಟಗಳನ್ನು ನನ್ನ ತಾಯಿಗೆ ಪತ್ರ ಬರೆದು ತಿಳಿಸಿದೆನು. ಅವಳು ಮರು ಟಪ್ಪಾಲಿಗೇನೇ, ಕ್ರುಶ್ಮನ್ ಸಾಲ್ಟನ್ನು ಸೇವಿಸಲು ಒತ್ತಾಯಪಡಿಸಿ, ಬರೆದಳು. ನಾನು ಕೂಡಲೇ ಒಂದು ಬಾಟ್ಲಿಯನ್ನು ಕೊಂಡುಕೊಂಡೆ, ಹಾಗೂ ಐದನೇ ಡೋಜು ಸೇವಿಸುವುದರೊಳಗಾಗಿ ಸರಿಯಾಗಿ ಕುಳಿತುಕೊಳ್ಳುವಂತಾಯಿತೆಂದು, ಪ್ರಾಮಾಣಿಕವಾಗಿ ಹೇಳಬಲ್ಲೆ. ಅದನ್ನೇ ಸೇವಿಸುತ್ತಾ ಎರಡು ವಾರಗಳೊಳಗೆ ಮೊದಲಿನಂತಾದೆ. ಈಗ ಈ ಆತ್ಮಾಶ್ಚರ್ಯಕಾರೀ ಔಷಧಿ ಇಲ್ಲದೆ ನಾನಿಲ್ಲ". —(ಮಿಸೆಸ್.) ಎ. ಜಿ.

ಮೂತ್ರ ಪಿಂಡಗಳು ಸರಿಯಾಗಿ ಕೆಲಸ ಮಾಡದಿರುವಲ್ಲಿ, ಕೆಲವು ಆಪ್ರಯೋಜಕ ಆಮ್ಲ ರಸಗಳು, ಹೊರ ಹೋಗುವ ಬದಲು,ಅಲ್ಲೆ ಉಳಿದು ರಕ್ತಪ್ರವಾಹವನ್ನು ಕೆಡಿಸಿ, ಬೆನ್ನು ನೋವು, ವಾತ, ಅತ್ಯಾಯಾಸವೇ ಮೊದಲಾದ ತ್ರಾಸದಾಯಕ ಲಕ್ಷಣಗಳನ್ನುಂಟು ಮಾಡುತ್ತವೆ. ಮೂತ್ರ ಪಿಂಡ ಸುಖವಿರೇಚಕಗಳಲ್ಲಿ ಕ್ರುಶ್ಮನ್ ಸಾಲ್ಟ್ ಅತ್ಯುತ್ತಮವಿದ್ದು, ಮಲಿನ ಆಮ್ಲಗಳನ್ನು ಜಾಡಿಸುವಲ್ಲಿ ಮೂತ್ರ ಪಿಂಡಗಳಿಗೆ ಸಹಕಾರಿಯಾಗಿದೆ.

What is a woman's chief charm?
A LOVELY HEAD OF HAIR THAT MEN ADMIRE
ಬಿಳಿ ಎಣ್ಣೆ, ದ್ರಾವಕ, ಇತರ ಬಾಧಾಕಾರಿ ಪದಾರ್ಥಗಳಿರುವ ಕೇಶತೈಲಗಳ ಉಪಯೋಗವು ಕೂದಲುದುರುವಿಕೆಯನ್ನು ಆರಂಭಿಸುತ್ತದೆ, ತಲೆಯ ಚರ್ಮಕ್ಕೆ ಬಾಧೆಯನ್ನು ಉಂಟುಮಾಡುತ್ತದೆ.
ಇವನ್ನೆಲ್ಲ ನಿವಾರಿಸಿ, ಕೂದಲ ಬೇರನ್ನು ಬೆಳೆಸಿ ವರ್ಧಿಸಲು, ಕೂದಲ ಪೋಷಣೆಯ ಶಕ್ತಿಯನ್ನುಳ್ಳುದೆಂದು ವಿಜ್ಞಾನಶಾಸ್ತ್ರಕ್ಕೆ ತಿಳಿದ ವಿಕಮಾತ್ರ ಪದಾರ್ಥವೆಂದರೆ ಪರಿಶುದ್ಧ ಹರಳೆಣ್ಣೆ. ಇದಕ್ಕೆ ಮೆದುಳನ್ನು ಆಶ್ಚರ್ಯಕರವಾಗಿ ತಂಪುಗೊಳಿಸುವ ಅಧಿಕ ಗುಣ ಇರುತ್ತದೆ. ಸ್ವಸ್ತಿಕ್ ಸುಗಂಧಪೂರಿತ ಹರಳೆಣ್ಣೆ ಉಪಯೋಗಿಸಿ, ನಿಮ್ಮ ಕೂದಲು ಎಷ್ಟು ಆಕರ್ಷಕ-ಶೋಭಾಯಮಾನ ಆಗುವದೆಂದು ನೋಡಿ.
Swastik
85 B
PERFUMED Castorol
SWASTIK OIL MILLS, LTD. BOMBAY 15

★ You Can Write a Book. ★

"Certainly not" you will probably say. But hear this. A great author was once asked to name his favourite work. He replied immediately "My bank pass book".

You too can write a book; not a novel perhaps or a poem but one like this author's favourite—the true story of a man who keeps his money matters in order. And a very interesting story it will prove.

Estd. 1906

RESOURCES OF A CRORE

★ CANARA BANK LIMITED

XXII] ಮಂಗಳೂರು, ತಾರೀಕು ೧೯—೭—೧೯೪೦ [೩೨
೧೮೬೨ ವಿಕ್ರಮ ಸಂವತ್ಸರದ ಆಷಾಢ ಶು। ೧೫ ಶುಕ್ರವಾರ

ಸತ್ಯಾಗ್ರಹವೂ ಬ್ರಿಟನೂ
ಗಾಂಧಿಜಿಯವರ ವೇದಾಂತ ಬ್ರಿಟನಿಗೊಪ್ಪದು

ಮಹಾತ್ಮರು, ಬ್ರಿಟಿಷರನ್ನು "ಸತ್ಯಾಗ್ರಹ ಮಾಡಿರಿ"—ಎಂದು ಕೇಳಿಕೊಂಡುದಕ್ಕೆ ಪ್ರತ್ಯುತ್ತರವಾಗಿ, ಬ್ರಿಟಿಷ್ ಸರಕಾರವೂ ಯೋಗ್ಯ ಉತ್ತರವನ್ನೇ ದಯಪಾಲಿಸಿದೆ. "ನಿಮ್ಮ ಸಲಹೆ ಮಾನ್ಯವಾದುದಾದರೂ, ಬ್ರಿಟಿಷ್ ಸಾಮ್ರಾಜ್ಯವು ಕೊನೆಯ ತನಕವೂ ಕಾದಾಡಲು ನಿಶ್ಚಯಿಸಿದೆಯಾಗಿ ತಮ್ಮ ಸೂಚನೆಯ ಅನುಷ್ಠಾನವು ಈಗ ಅಸಾಧ್ಯ" ಎಂಬುದೇ ಆ ಉತ್ತರ. ಆ ಉತ್ತರವು ಅಭಿಮಾನಾಸ್ಪದವೂ, ಆದರಣೀಯವೂ ಇದೆ.

ಮಹಾತ್ಮರ ನುಡಿಗಳನ್ನು ಅರ್ಥಮಾಡಿಕೊಳ್ಳುವದರಲ್ಲಿ ತುಂಬಾ ಜಾಣ್ಮೆ ಬೇಕಾಗುತ್ತದೆ. ಇಲ್ಲವಾದರೆ ವಿವಿಧ ವಿರೋದಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಇವರ ಬರಹಗಳು, ಹೇಳಿಕೆಗಳು, ಕಾರ್ಯಗಳು—ಎಂತಹನಿಗೂ ಸಂಶಯ ತಂದೊಡ್ಡದೆ ಇರಲಾರವು. ಕ್ಷಮೆ, ದಯೆ, ಎಂಬುದೇ ತಿಳಿಯದ ಹಿಟ್ಲರನ ಮುಂದೆ, ವಿವಿಧ ರಾಷ್ಟ್ರಗಳು ಆತ್ಮರಕ್ಷಣೆಗಾಗಿ ಯುದ್ಧಾಸಕ್ತವಾಗಿರುವಲ್ಲಿ ಮಹಾತ್ಮರು ಸತ್ಯಾಗ್ರಹ ಹೂಡಿರಿ ಎಂದು ಬ್ರಿಟಿಷರಿಗೇಕೆ ಉಪದೇಶಿಸಬೇಕು?

ಸತ್ಯಾಗ್ರಹವೆಂಬ ಅಸ್ತ್ರವನ್ನು ನಮ್ಮದೇ ಆದ ವಸ್ತುಗಳನ್ನು ಅನ್ಯರು ವಶಪಡಿಸಿಕೊಂಡಾಗ, ವಶಪಡಿಸಿಕೊಳ್ಳಲು ಬಂದಾಗ ಅಥವಾ ನ್ಯಾಯವಾಗಿ ನಮಗೆ ಬರಲೇಬೇಕಾದ ವಸ್ತುಗಳಿಗಾಗಿ, ಹೂಡಬಹುದಾಗಿದೆ. ನಾವು, ನಮ್ಮ ದೇಶವನ್ನು ನಮಗೆ ಕೊಡಿರಿ, ನಮ್ಮ ಸ್ವಾತಂತ್ರ್ಯ ನಮಗೆ ಬಿಡಿರಿ ಎಂದು ಸತ್ಯಾಗ್ರಹ ಹೂಡುವುದರಲ್ಲಿ ನ್ಯಾಯವಿದೆ. ಬದಲಾಗಿ, ಇನ್ನೊಬ್ಬನ ವಸ್ತುಗಳನ್ನು ಅಪಹರಿಸಿ, ಆ ವಡವೆಯ ಯಜಮಾನನನ್ನು ನಿರ್ಗತಿಕನಾಗಿ ಮಾಡಿ ಮೆರೆಯುವಾಗ, ಆದೇ ಆ ವಡವೆಯ ಒಡೆಯ, ತನ್ನ ವಸ್ತುವನ್ನು ಕಸಿದುಕೊಳ್ಳಲು ಬಂದಾಗ ನಾವು ಸತ್ಯಾಗ್ರಹ ಹೂಡಿದರೆ ಅದು ಅಪ್ರಯೋಜಕವಾಗದೇ? ಅಂತೆಯೇ ಇನ್ನೊಂದು ದೃಷ್ಟಿಯಿಂದ ನೋಡಿದರೆ—ಒಬ್ಬ ಧನಾಢ್ಯನು ಇನ್ನೊಬ್ಬ ಧನಾಢ್ಯನೊಡನೆ, ತನ್ನ ಅಧಿಕಾರ ಹೆಚ್ಚಿಸಿಕೊಳ್ಳಲು ಕಾದಾಡುವಾಗ,—ಅವರಲ್ಲೊಬ್ಬನು ಸತ್ಯಾಗ್ರಹ ಮಾಡಿದರೆ ಪ್ರಯೋಜನವಾದೀತೇ? ಈ ವಿಚಾರಗಳನ್ನು ವಿವೇಚಿಸಿದರೆ, ಸತ್ಯಾಗ್ರಹವನ್ನು ಎಲ್ಲಿ, ಏಕೆ, ಯಾವ ಸಂದರ್ಭದಲ್ಲಿ ಮಾಡಬೇಕೆಂಬುದು ಹೊಳೆಯದಿರದು.

ಮಹಾತ್ಮರು ಇಂದು ಬ್ರಿಟಿಷರಿಗಿತ್ತ ಉಪದೇಶ—ಅದೇಕೋ ಸರಿತೋರದಾಗಿದೆ. ಇಂಗ್ಲೀಷರು ಇಂದು ಲೋಕಶಾಂತಿಗಾಗಿ, ಏಕಾಂಗಿಯಾಗಿ, ಮಹಾಶಕ್ತಿಯನ್ನು ತಮ್ಮ ಸಂಪೂರ್ಣ ಭಾರವನ್ನು ದೇವರ ಮೇಲೆ ಹಾಕಿ ಇದಿರಿಸುತ್ತಿರುವಾಗ,—ಕೈಲಾಗದ ಕಾರ್ಯವಿದೆಂದು ಅರ್ಥಬರುವಂತೆ—ಸತ್ಯಾಗ್ರಹಮಾಡಿ; ನಾಜಿ ಆಕೃತ್ಯಕ್ಕೆ ಶರಣಾಗಿ ಎಂದರೆ ಯಾರು ತಾನೇ ಒಪ್ಪಬಲ್ಲರು? ಅಲ್ಲದೆ, ಸ್ಪೈನ್ ಯುದ್ಧದಲ್ಲಿ ಸೀನರ್ ನೆಗ್ರಿನ್‌ನಿಗೆ ಜಯವನ್ನು ಬಯಸಿದ, ಪೋಲೇಂಡಿನ ಕಾದಾಟ—ಅಹಿಂಸಾಮಯವೆಂದು ಸಾರಿದ, ಚೀನಕ್ಕೆ ಹೊರಟ ಭಾರತೀಯ ಶುಷ್ರೂಶಾ ದಳವನ್ನು ಹರಸಿದ, ಚಾಂಗ್-ಕೈ-ಶೇಕರಿಗೆ ಜಪಾನಿಗೆ ಶರಣಾಗಿರೆಂದು ಉಪದೇಶಕೊಡದ ಮಹಾತ್ಮರು ಬ್ರಿಟಿಷರಿಗೆ ಇದೇಕೆ ಈ ಉಪದೇಶವಿತ್ತರು? ಈ ಭಾವನೆಯಲ್ಲಿ, ಉಪದೇಶದಲ್ಲಿ ಪಕ್ಷಪಾತ ದೃಷ್ಟಿ ಇದೆಯೇ ಅಥವಾ ಮಹತ್ತಾದ ಕ್ರಾಂತಿಕಾರಕ ಭಾವನೆ ಅಡಗಿ ನಿಂತಿದೆಯೇ?

ಬ್ರಿಟಿಷ್ ಸಾಮ್ರಾಜ್ಯದ ಶಕ್ತಿ ಅಸಮಾನ, ಅದು ಕೊನೆಯ ತನಕ ಕಾದಿ ತನ್ನ ಧ್ಯೇಯವನ್ನು ಪೂರ್ತಿಗೊಳಿಸದಿರದು, ಬ್ರಿಟನ್ ಇಂದು "ನಾಜಿ ತತ್ವದ ನಾಶಕ್ಕಾಗಿ," "ಯುರೋಪಿನ ಶಾಂತಿಗಾಗಿ," "ಕ್ರೈಸ್ತರ ಹಾಗೂ ಕ್ರೈಸ್ತಧರ್ಮದ ರಕ್ಷಣೆಗಾಗಿ," "ಡೆಮೊಕ್ರೆಸಿಗಳ ರಕ್ಷಣೆಗಾಗಿ"—ಅಂತೂ ಇನ್ನೇನೋ ವಿವಿಧ ವಿಚಾರಗಳಿಗಾಗಿ ಕಾದಾಡುತ್ತಿದೆ—ಎಂಬುದನ್ನು ಬ್ರಿಟಿಷ್ ಸರಕಾರ ಜಗತ್ತಿಗೂ, ಪ್ರಾಮುಖ್ಯವಾಗಿ ನಮಗೂ ತಿಳಿಸಿರಲು—ಈ ವಿಚಾರದಲ್ಲಿ ಎರಡಾಭಿಪ್ರಾಯವಿರಲಾರದು. ಅಲ್ಲದೆ, ಬ್ರಿಟನ್ ಕಾದಾಟದಲ್ಲಿ ನಾಜಿಗಳಿಗಿಂತ ಹಿಂದಿಲ್ಲವಾದುದರಿಂದ ಹಿಮ್ಮೆಟ್ಟಲಾರದೆಂಬುದು ಸ್ವಯಂವ್ಯಕ್ತ!

ಹಾಗಿರಲು ತನ್ನ ಸಕಲ ಪರಿಸ್ಥಿತಿ—ಶಕ್ತಿಗಳಿಗನುಗುಣವಾಗಿ ಬ್ರಿಟನ್ ಸತ್ಯಾಗ್ರಹ ಮಾಡಲಾರದಾಗಿದೆ ಹುಲಿಯ ಮುಂದೆ ಸಿಂಹವೇಕೆ ಸತ್ಯಾಗ್ರಹ ಹೂಡಬೇಕು? ಅದರಿಂದೇನು ಪುರುಷಾರ್ಥ ಸಾಧನೆಯಾದೀತು?

ಕೊಮ್ಯುನಿಸ್ಟರ ಹಾವಳಿ
ಸರ್ ಸಿಕಂದರರ ಅಪಾದನೆ

ಭಾರತದ ಅಸೆಂಬ್ಲಿಯ ಇತಿಹಾಸದಲ್ಲಿ ಮೊದಲ ಬಾರಿಗೆ ಪಂಜಾಬ್ ಅಸೆಂಬ್ಲಿಯು ಗುಪ್ತ ಅಧಿವೇಶನ ನಡೆಸಿತು. ಭಾರತದಲ್ಲಿ ಮುಖ್ಯವಾಗಿ ಪಂಜಾಬದಲ್ಲಿ ಕೊಮ್ಯೂನಿಸ್ಟ್ ಪಾರ್ಟಿಯ ಸದಸ್ಯರು ಕೊಡುತ್ತಿರುವ ಹಾವಳಿ ಹಾಗೂ ವಿಚಾರಣೆ ಇಲ್ಲದೆ ನೂರಾರು ಮಂದಿಯನ್ನು ಸೆರೆಹಿಡಿದ ವಿಷಯಗಳ ಕುರಿತಾಗಿ ಚರ್ಚಿಸುವದಕ್ಕಾಗಿ ಸರ್ ಸಿಕಂದರರು, ಕೊಮ್ಯುನಿಸ್ಟರಿಗೆ ಅಸೆಂಬ್ಲಿಯಲ್ಲಿ ನಡೆದ ಸಕಲ ವಿಚಾರಗಳೂ ತಿಳಿಯದಂತೆ ಗುಪ್ತ ಅಧಿವೇಶನ ನಡೆಸಿದರು.

ಗುಪ್ತ ಅಧಿವೇಶನದಲ್ಲಿ ಪಂಜಾಬದ ಪ್ರಧಾನರಿಂದ ತರಲ್ಪಟ್ಟ ಸುದೀರ್ಘ ಠರಾವೊಂದು ಪಾಸಾಗಿದೆ. ಇದರಲ್ಲಿ "ಪಂಜಾಬವು ಭಾರತದ ಪ್ರಾಂತ್ಯಗಳಲ್ಲೆಲ್ಲ ಹೆಚ್ಚಿನ ಸಂಖ್ಯೆಯಿಂದ ಸೈನಿಕರನ್ನು ಒದಗಿಸುವ ಸಂಸ್ಥಾನ. ಅಂದ ಮೇಲೆ ಈ ಸ್ಥಾನಕ್ಕೆ ಜ್ಯುತಿಬರದಂತೆ ಸರಕಾರ ನೋಡಬೇಕಾಗಿದೆ. ಕೊಮ್ಯುನಿಷ್ಟರು ಸೈನ್ಯಕ್ಕೆ ಮಂದಿ ಸೇರದಂತೆ ವಿಧವಿಧವಾಗಿ ಪ್ರಚಾರಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ ಈ ಸಂಸ್ಥೆ ಕ್ರಾಂತಿಯ ಮೂಲಕ, ರಷ್ಯದಲ್ಲಿನ ಸರಕಾರದಂತಹ ಸರಕಾರವನ್ನು ಭಾರತದಲ್ಲಿ ಸ್ಥಾಪಿಸುವ ಮಹತ್ವಾಕಾಂಕ್ಷೆಯಿಂದ ಕೆಲಸ ನಡೆಸುತ್ತಿರುವುದು. ಕಾಂಗ್ರೆಸ್ ಸರಕಾರವಿದ್ದಾಗಲೂ ಕೂಡ, ಈ ಸಂಸ್ಥೆಯ ಮೇಲಿದ್ದ ತಡೆ ತೆಗೆದುಹಾಕಲ್ಪಟ್ಟರಲಿಲ್ಲ. ಮಾತ್ರವಲ್ಲ, ಪ್ರಮುಖ ಕಾಂಗ್ರೆಸ್ ನಾಯಕರೇ ಈ ಸಂಸ್ಥೆಯ ವರ್ತನೆಯನ್ನು ಖಂಡಿಸಿದ್ದಾರೆ. ಈ ಸಂಸ್ಥೆಯ ಸದಸ್ಯರು ಕಾಂಗ್ರೆಸಿನ ಶಾಂತಿ-ನೀತಿಗಳಿಗೆ ಒಪ್ಪದಿದ್ದರೂ, ಅದರಲ್ಲಿ ಸೇರಿಕೊಂಡು ಕೆಲಸ ನಡೆಸುತ್ತಿದ್ದಾರೆ" ಕೊಮ್ಯುನಿಸ್ಟ್ ಕರಪತ್ರವೊಂದರಲ್ಲಿ "ಇದೀಗ ಬ್ರಿಟಿಷ್ ಸರಕಾರದ ವಿರುದ್ಧ ಯುದ್ಧಹೂಡಲು ಭಾರತೀಯರಿಗೆ ಸುಸಮಯ. ಈ ವಿಚಾರದಲ್ಲಿ ಮೊದಲ ಕಾರ್ಯ ಮುಷ್ಕರ, ಮುಂಪೆ ತೆರಿಗೆ ವಿರುದ್ಧ, ಗೇಣಿ ವಿರುದ್ಧ ಚಳವಳಿ. ಈ ರೀತಿಯಿಂದ ಮಿಲಿಯಾಂತರ ಮಂದಿಯನ್ನು ಸರಕಾರದ ವಿರುದ್ಧ ಕೂಡಿಸಬಹುದಾಗಿದೆ; ಸರಕಾರದ ರಚನೆಯನ್ನು ಅಪ್ರಯೋಜಕಗೊಳಿಸಬಹುದಾಗಿದೆ" ಎಂದು ಮುಂತಾಗಿ ಬರೆಯಲ್ಪಟ್ಟದ್ದುದನ್ನು ಕಂಡರೆ ದೇಶದ ಶಾಂತಿಗೆ ಈ ಸಂಸ್ಥೆಯ ಮೇಲೆ ಕಠಿನ ಶಾಸನ ತರುವುದು ಅಗತ್ಯವಿದೆ" ಎಂದು ಮುಂತಾಗಿ ವಿವರಿಸಿದ್ದಾರೆ ಸರ್ ಸಿಕಂದರರು ಕೊಮ್ಯುನಿಸ್ಟ್ ಪಂಗಡದ ಹಾವಳಿ ನಿಲ್ಲಿಸಲು ಪಣ ತೊಟ್ಟಿದ್ದಾರೆ.

ಮಂಗಳೂರು ಮುನಿಸಿಪಾಲಿಟಿ

ಕಳೆದ ಸೋಮವಾರ ನಮ್ಮ ನಗರ ಸಭೆಯು ಚೆಯರ್ಮ್ಯಾನರಾದ ಶ್ರೀ. ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿ ೧೯೩೯-೪೦ರ ಆಡಳಿತೆ ವರದಿಯನ್ನು ಮಂಜೂರುಮಾಡಿತು.

ನಗರದ ಎಲ್ಲಾ ಮುನ್ಸಿಪಲ್ ಶಾಲೆಗಳಲ್ಲೂ ಧರ್ಮಾರ್ಥ ವಿದ್ಯಾಭ್ಯಾಸವು ಸಾಗುತ್ತಿರುವುದಲ್ಲದೆ, ಕಡ್ಡಾಯ ಶಿಕ್ಷಣದ ವಿಚಾರವಾಗಿ ಕೌನ್ಸಿಲು ಯೋಚಿಸುತ್ತಿದೆ ೧೯೪೦ರ ಎಪ್ರಿಲ್ ೧ರಿಂದ ಶೇ. ೩೦ಷ್ಟು ವಿದ್ಯಾ ತೆರಿಗೆ ಹೊರಿಸಲು ಸರಕಾರದ ಅನುಮತಿ ದೊರೆತಿದೆ. ಮುನ್ಸಿಪಲ್ ಶಾಲಾ ಮಕ್ಕಳ ಆರೋಗ್ಯವನ್ನು ದಾಕ್ತರರಾದ ಕೌನ್ಸಿಲರು ಹಾಗೂ ಸ್ತ್ರೀ ಮೆಡಿಕಲ್ ಆಫೀಸರರು ಧರ್ಮಾರ್ಥ ನಡೆಸಿರುವರೆಂದು ತಿಳಿದು ಬಂದಿದೆ. ಶ್ರೀಮತಿ ಲೀಲಾಬಾಯಿ ಏಕಾಂಬರ ರಾವ್, ಶ್ರೀ. ಆರ್. ಬಿ. ಸಿ. ಡಿ. ಅಂದ್ರಾಡೆ ಯವರು ಚೆಯರ್‌ಮ್ಯಾನರು ಮತ್ತು ವೈಸ್ ಚೆಯರ್ಮ್ಯಾನರು ಆಡಳಿತೆಯನ್ನು ಕುಂದಿಲ್ಲದೆ ನಡೆಸಿದುದಕ್ಕಾಗಿ ಶ್ಲಾಘಿಸಿದರು. ಶ್ರೀ. ಫೆಲಿಕ್ಸ್ ಅಲ್ಬುಕರ್ಕರು ಹಾಗೂ ವಿ. ಡೆನಿಸ್ ಪಿಂಟೋ—ಅವರು ಕಮಿಶನರ್ ಮತ್ತು ಹೆಲ್ತ್ ಆಫೀಸರರನ್ನೂ, ಶ್ರೀ. ಎಮ್. ಮಾಧವರಾಯರು ಆರೋಗ್ಯಶಾಖೆಯನ್ನೂ ಹಾಗೂ ಭಗಿನೀ ಸಮಾಜವನ್ನೂ ಶ್ಲಾಘಿಸಿದರು.

ಹಿಂದೂದೇಶ

ಜಿನ್ನರ ಉತ್ತರ

"ವಿನೀತವಾದ ಮೌಲಾನ ಅಜಾದರ ಕೇಳಿಕೆಗೆ ಮಿ॥ ಜಿನ್ನರು ಕೊಟ್ಟ ಅಸಮಾನ ದೌಷ್ಟ್ಯ ಉತ್ತರವನ್ನು, ಆತ ಲೀಗಿನವನಾಗಿರಲಿ — ಕಾಂಗ್ರೆಸಿನವನಾಗಿರಲಿ, ಅಂತಹ ವಿದ್ಯಾವಂತ ಮುಸಲ್ಮಾನ ಬಂಧುವು ಅಪಮಾನದಿಂದ ಹಾಗೂ ಬೇಸರದಿಂದ ಓದಿರದೆ ಇರಲಾರನು" ಎಂದು ಮುಂಬಾಯಿ ಸರಕಾರದ ಮಾಜಿ ವಿದ್ಯಾಮಂತ್ರಿಗಳಾದ ಮೌಲ್ವಿ ಸರ್ ರಫಿ ಉದ್ದೀನ್ ಅಹಮ್ಮದರು ಹೇಳಿ, ಜಿನ್ನರ ವರ್ತನೆಯನ್ನು ಖಂಡಿಸಿ ಹೇಳಿಕೆ ಕೊಟ್ಟಿದ್ದಾರೆ.

ಅಪಹಾರ

ತನ್ನ ಮಿತ್ರನೊಬ್ಬನೊಡನೆ, ಹೊಲದಲ್ಲಿ ದನ ಕಾಯುತ್ತಿದ್ದ ಬನ್ನುವಿನ ವ್ಯಾಪಾರಿಯಾದ ಖಾನ್‌ಚಂದ್ ಎಂಬಾತನು ಡಕಾಯಿತರಿಂದ ಅಪಹರಿಸಲ್ಪಟ್ಟಿದ್ದಾನೆ. ಈತನ ಮಿತ್ರ ತಪ್ಪಿಸಿಕೊಂಡ.

ಗ್ರಾಂಟು

ಬಂಗಾಲ ಸರಕಾರವು ಪ್ರಸೂತ ವಿದ್ಯಾ ಸಂಸ್ಥೆಯಾದ, ಶ್ರೀ ರಾಮಕೃಷ್ಣ ಮಿಶನಿನ ಬಿಡುವಂಗಲ್ ಪ್ರತಿಸ್ಥಾನಕ್ಕೆ ಆದರ ಹೊಸ ಕಟ್ಟಡದ ಬಗ್ಗೆ ರೂ. ೪೦ ಸಾವಿರದ ಗ್ರಾಂಟು ಕೊಟ್ಟಿದೆ.

ಚೀನದ ಆಹ್ವಾನ

"ಚೀನಾ ದೇಶದ ಸ್ತ್ರೀಯರ ಪರವಾಗಿ ನಿಮ್ಮ ಸಂದರ್ಶನವನ್ನು ನಮ್ಮ ದೇಶಕ್ಕೆ ನಾನು ಆದರದಿಂದ ಸ್ವಾಗತಿಸುತ್ತೇನೆ. ವೈರಿಗಳ ವಿಮಾನಗಳು ದಿನನಿತ್ಯ ರಾಷ್ಟ್ರದ ಎಲ್ಲೆಲ್ಲೂ ಬಾಂಬಿನ ಸುರಿಮಳೆ ಸುರಿಸುವದರಿಂದಲೇ ಮೊದಲಾಗಿ ತಮಗೆ ಪ್ರಯಾಣ ಕಷ್ಟತರವಾಗಬಹುದಾದುದರಿಂದ ನಿಮ್ಮ ಪ್ರಯಾಣವನ್ನು ಅಕ್ಟೋಬರ ಅಥವಾ ನವಂಬರದಲ್ಲಿ ವ್ಯವಸ್ಥೆಗೊಳಿಸಿರಿ" ಎಂದು ಚೀನದ ಮೇಡಾಮ್ ಚಾಂಗ್-ಕೈ-ಶೇಕರು ವಿಜಯಲಕ್ಷ್ಮಿ ಪಂಡಿತರಿಗೆ ಬರೆದಿದ್ದಾರೆ.

ಪಾನ ನಿಷೇಧ

ಮುಂಬಾಯಿಯಲ್ಲಿ ಪಾನನಿಷೇಧ ಕಾನೂನನ್ನು ಸರಕಾರ ತೆಗೆದು ಹಾಕಿದುದರಿಂದ, ಅಲ್ಲಿನ ಕಾಂಗ್ರೆಸು ಪಾನ ನಿಷೇಧ ಪ್ರಚಾರವನ್ನು ನಡೆಸಲು ನಿರ್ಣಯಿಸಿದೆ.

ಧಾರ್ಮಿಕ ಕಲಹ ಸುದ್ದಿ

ಧಾರ್ಮಿಕ ಕಲಹಗಳ ಸುದ್ದಿಗಳನ್ನು ಪ್ರಕಟಿಸುವಾಗ ಅವುಗಳಿಗೆ ಪ್ರಾಧಾನ್ಯತೆ ಕೊಡದೆ, ಅಲ್ಪದರಲ್ಲೆ ಮುಗಿಸಬೇಕೆಂದೂ, ಇಲ್ಲವಾದರೆ ಕಲಹ ಬೆಳೆಯಲು ಅಸ್ಪದವಾಗುವುದೆಂದೂ ಪಂಜಾಬದ ಪ್ರಧಾನರು ಅಲ್ಲಿನ ಪತ್ರಿಕಾ ವ್ಯವಸಾಯಿಗಳಿಗೆ ಸೂಚಿಸಿ, ಎಚ್ಚರಿಸಿದ್ದಾರೆ.

ಹೊಲ್‌ವೆಲ್ ಸತ್ಯಾಗ್ರಹ

ತಾ. ೧೫ರಂದು ಒಂದೇ ದಿನದಲ್ಲಿ ೫೫ ಮಂದಿಯ ಸೆರೆಯಾಗಿದೆ. ಇವರಲ್ಲಿ ೬ ಮಂದಿ ಸ್ತ್ರೀಯರು.

ಚೀನಾ ವಿಚಾರ

ಕಾದಾಟದ ರಾಷ್ಟ್ರಗಳೊಡನೆ ನಡೆಸಿದ ಸಂಧಿ ಇದುವರೆಗೂ ಭೀಕರವಾಗಿದೆಯಾದುದರಿಂದ, ಜಪಾನಿನೊಡನೆ ಅಂತಹ ಸಂಧಿ ನಡೆಸುವ ಸಾಮ್ರಾಜ್ಯಶಾಹಿಗಳು ಎಚ್ಚರಿಕೆ ವಹಿಸಬೇಕೆಂದೂ; ಭಾರತ ಹಾಗೂ ಚೀನಾ ಇಂದು ಅತೀ ಹತ್ತಿರ ಬಂದಿವೆ, ಅಂತೆಯೇ ನಿಲ್ಲುವವು; ಅದರಿಂದ ಶಾಂತಿಯ ಆಟ ನಡೆಯಲಾರದೆಂದೂ, ಪಂಡಿತ ನೆಹರುಗಳು ಎಚ್ಚರಿಸಿದ್ದಾರೆ.

"ವಿಪ್"ರವರ ಸೆರೆ

ಸಂಯುಕ್ತ ಪ್ರಾಂತ್ಯದ ಅಸೆಂಬ್ಲಿ ಕಾಂಗ್ರೆಸ್ ಪಾರ್ಟಿಯ "ವಿಪ್" ಆಗಿದ್ದ ಶ್ರೀ. ಆರ್. ವಿ. ಥಾಲೇಕರ್, ಯಂ. ಯಲ್. ಎ. ಮತ್ತು "ಜನ ಸಂಗ್ರಾಮ" ವಾರ ಪತ್ರಿಕೆಯ ಸಂಪಾದಕರಾದ ಶ್ರೀ. ಸುಖಾನಂದನ್ ವ್ಯಾಸರವರೂ ಡಿಫೆನ್ಸ್ ಕಾನೂನಿನಂತೆ ಸೆರೆ ಹಿಡಿಯಲ್ಪಟ್ಟಿದ್ದಾರೆ.

"ಬ್ಯಾಂಕಿನಲ್ಲಿ ಹಣವಿಡಬೇಡಿ"

ಇಂಪೀರಿಯಲ್ ಬ್ಯಾಂಕಿನ ಮುಂದೆ ನಿಂತು, ಬ್ಯಾಂಕಿನಲ್ಲಿ ಹಣವಿಡಬೇಡಿರಿಯೆಂದು ಪಿಕೆಟಿಂಗ್ ನಡೆಸಿದ ಮೂವರು ಕಾಂಗ್ರೆಸ್ ಸತ್ಯಾಗ್ರಹಿಗಳು ಪೊಲ್ಲಾಚಿಯಲ್ಲಿ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಇಂದಿನ ವಾರ್ತೆ

ಅಲೆಕ್ಸಾಂಡ್ರಿಯ

ವೈರಿಗಳ ವಿಮಾನಗಳು ಇಲ್ಲಿ ದಾಳಿ ನಡೆಸಿ ಬಾಂಬುಗಳನ್ನು ಸುರಿಸಿವೆ. ಒಂದು ವಿಮಾನ ಉರುಳಿಸಲ್ಪಟ್ಟಿದೆ.

ಇಂಗ್ಲಾಂಡ್

ದಕ್ಷಿಣ ಇಂಗ್ಲಾಂಡಿನ ಮೇಲೆ ವೈರಿಗಳ ವಿಮಾನಗಳು ಹಾರಾಡಿದುವು.

ಫ್ರಾನ್ಸಿನ ನಷ್ಟ

ಒರಾನ್‌ನಲ್ಲಿ ಫ್ರೆಂಚ್ ಹಾಗೂ ಬ್ರಿಟಿಷ್ ಹಡಗುಪಡೆಗಳೊಳಗಾದ ಕಾದಾಟದಿಂದ ಫ್ರೆಂಚರಿಗಾದ ನಷ್ಟವನ್ನು ಬ್ರಿಟನ್ನು ಕೊಡಬೇಕೆಂದು ಫ್ರೆಂಚ್ ಸರಕಾರ ತಿಳಿಸಿರುವುದಂತೆ.

ಆರ್. ಎ. ಎಫ್.

ಆರ್. ಎ ಎಫ್. ವಿಮಾನಗಳು ಸೋಮವಾರ ದಿನ ಹೋಲೆಂಡ್, ಜರ್ಮನಿಗಳಲ್ಲಿನ ವಿವಿಧ ಯುದ್ಧಸಾಮಗ್ರಿಗಳ ಪ್ರದೇಶಗಳಿಗೆ ಬಾಂಬುಗಳನ್ನು ಸುರಿಸಿ, ಜರ್ಮನಿಗೆ ವಿಶೇಷ ನಷ್ಟವನ್ನುಂಟುಮಾಡಿರುವವಂತೆ.

ಭಾರತ ನಾರಿಯರು

ಅಖಿಲ ಭಾರತ ಸ್ತ್ರೀ ಪರಿಷತ್ತು ಇಂದಿನ ಯುದ್ಧದ ವಿಚಾರದಲ್ಲಿ ಒಂದು ಠರಾವನ್ನು ಪಾಸು ಮಾಡಿ, ಭಾರತಕ್ಕೆ ಸ್ವಾತಂತ್ರ್ಯವನ್ನೀಯುವುದೇ ಬ್ರಿಟನ್ನು ಇಂದು ತಾನು ಕಾದಾಡುತ್ತಿರುವ ಆ ಲೋಕದ ಡೆಮೊಕ್ರೆಸಿಗಳನ್ನು ಉಳಿಸುವ ಮೊದಲ ಮೆಟ್ಟಲು ಎಂದು ಅಭಿಪ್ರಾಯಪಟ್ಟಿದೆ.

ಬ್ರಿಟನ್ನಿನ ಸೆರೆಯಾಳುಗಳು

ಬ್ರಿಟನ್ನು ೧೨,೫೦೦ ಗಂಡುಸರು ಮತ್ತು ೩೯೦೦ ಹೆಂಗುಸರನ್ನು ವೈರಿಗಳೆಂಬುದರಿಂದ ಸೆರೆ ಹಿಡಿದಿರುವುದಂತೆ. ಇವರಲ್ಲಿ ೭೫೦೦ ಮಂದಿ ಗಂಡುಸರು ಪರರಾಷ್ಟ್ರಗಳಲ್ಲಿರಿಸಲ್ಪಟ್ಟಿರುವರು.

ಜಿಬ್ರಾಲ್ಟರ್

೧೭ ವರ್ಷಕ್ಕಿಂತ ಕೆಳಗಣ ಮಕ್ಕಳು ಹಾಗೂ ಹೆಂಗುಸರೂ, ಅಂಗಹೀನರೂ ಮುಂತಾದವರು ಇಲ್ಲಿಂದ ಹೋಗಬೇಕೆಂದು ಆಪ್ಪಣೆಯಾಗಿದೆ.

ರಷ್ಯದ ಎಚ್ಚರಿಕೆ

ರುಮೇನಿಯದಿಂದ ಬೆಸ್ಸರೇಬಿಯಕ್ಕೆ ಪ್ರಯಾಣ ಬೆಳೆಸಲು ಮುಂದಾದ ಮಂದಿಯನ್ನು ಹಿಂಸಿಸಿದ ವಿಚಾರದಲ್ಲಿ ರಷ್ಯ ಸರಕಾರವು ಕಠಿನವಾಗಿ ವಿರೋಧಿಸಿದೆ.

ಸರ್ ಪನ್ನೀರ್‌ಸೆಲ್ವಂ

ಇಂಡಿಯಾ ಸೆಕ್ರೆಟರಿಗಳ ಎಡ್ವೈಸರರಾಗಿ ನೇಮಿಸಲ್ಪಟ್ಟ ಸರ್ ಪನ್ನೀರ್‌ಸೆಲ್ವಂರವರು ಪ್ರಯಾಣ ಬೆಳೆಸುತ್ತಿದ್ದಾಗಲೇ ದಿವಂಗತರಾದುದರಿಂದ, ಅವರ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಿ। ಚರ್ಚಿಲ್ಲರು ಒಂದು ಸಾವಿರ ಪವನುಗಳನ್ನು ಮಂಜೂರು ಮಾಡಿದ್ದಾರೆ.

ಜಪಾನೀ ಮಂತ್ರಿಮಂಡಲ

ಜಪಾನಿನ ಮಂತ್ರಿಮಂಡಲದಲ್ಲಿ ಅಲ್ಪ ಅಭಿಪ್ರಾಯಭೇದ ಉಂಟಾದುದರಿಂದ ಅದು ರಾಜೀನಾಮೆ ಕೊಟ್ಟಿದೆ. ಹೊಸ ಮಂತ್ರಿಮಂಡಲದ ರಚನೆ ಸಾಗುತ್ತಿದೆ.

ತಿಲಕ ದಿನಾಚರಣೆ

ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಆಗೋಸ್ತು ೧ನೇ ತಾರೀಕಿನ ದಿನವನ್ನು "ಪಾನ ನಿಷೇದ ದಿನ" ಮತ್ತು "ತಿಲಕ ದಿನ"ವಾಗಿ ಆಚರಿಸಲು ನಿಶ್ಚಯಿಸಿದೆ.

ನಾಣ್ಯ ಸಂಗ್ರಹ

ನಾಣ್ಯ ಸಂಗ್ರಹಿಸಿದರೆಂಬ ಆಪಾದನೆಯ ಮೇಲೆ ಮೂರು ಮಂದಿಯನ್ನು ಹೌರಾ ಪೋಲೀಸರು ಸೆರೆಹಿಡಿದಿದ್ದಾರೆ. ಸೆರೆಹಿಡಿದಾಗ ಇವರ ಬಳಿ ೧೬೦೦ ರೂಪಾಯಿಗಳೇ ದೊರೆತುವಂತೆ.

ಯಂ. ಯಲ್. ಎ.ಯ ಕೊಲೆ

ಸಿಂಧ್ ಕಾಂಗ್ರೆಸ್ ಯಂ. ಯಲ್. ಎ. ಯವರಾದ ಶ್ರೀ ಹಸ್ಸಾರಾಮ್ ಪಮ್ನಾನಿಯವರನ್ನು ಅವರು ರೊಹ್ರಿ ನಗರಕ್ಕೆ ನಡೆದುಕೊಂಡು ಹೋಗುತ್ತಿದ್ದಾಗ ಯಾರೋ ರಿವಾಲ್ವರಿನಿಂದ ಗುಂಡಿಟ್ಟು ಕೊಂದಿರುವರಾಗಿ ತಿಳಿದುಬಂದಿದೆ ಶ್ರೀಯುತರು ಆದಾಗಲೇ ಕೊಲೆಮಾಡಲ್ಪಟ್ಟ.



ಅವುಗಳ
ಹಲ್ಲಿನ ಮೇಲೆ
ಅವು ಆಧರಿಸಿಕೊಂಡಿವೆ

DUNLOP

ಡನ್‌ಲಪ್ ಮಾತ್ರ
ಹಲ್ಲುಗಳು ಇರುವ ಟಾಯರುಗಳು



ರಸ್ತೆ ಅದುಮಿ ಹಿಡಿಯಲು 2000 ಹಲ್ಲುಗಳು

ಭಾರತದ ವಿದ್ಯಮಾನಗಳಿಗಾಗಿ ಭಾರತದಲ್ಲಿ ಮಾಡಲ್ಪಟ್ಟುದು

DK188

ಅಸ್ಸನದಮಲ್ ಎಂಬ ಕಾಂಗ್ರೆಸ್ ಕೆಲಸಗಾರರ ಮರಣದ ಕುರಿತಾಗಿ ಗೋಟ್ಕಯಲ್ಲಿ ವಿಚಾರಣೆ ನಡೆಸಿ ಹಿಂದಿರುಗಿದ್ದರಷ್ಟೆ!

ಬೆಂಗಳೂರು ಮಿಲ್

ಬೆಂಗಳೂರಿನ ಬಿನ್ನಿ ಮಿಲ್‌ನ ೨ಸಾವಿರ ಕೆಲಸಗಾರರು ಬೋನಸ್‌ನ ವಿಚಾರದಲ್ಲಿ ಮನಸ್ತಾಪ ಬಂದು ತಾ. ೧೭ರಿಂದ ಮುಷ್ಕರ ಹಿಡಿದಿದ್ದಾರೆ. ಮುಷ್ಕರ ಶಾಂತರೀತಿಯಿಂದ ಸಾಗುತ್ತಿದೆ.

ಮಿಸೆಸ್ ಬಿಮಲ್ ದೇವಿ

ಬೆಂಗಾಲ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಲ್ಲೊಬ್ಬಳಾದ ಶ್ರೀಮತಿ ಬಿಮಲ್ ಪ್ರತಿಬಾ ದೇವಿಯನ್ನು, ಕಲ್ಕತ್ತೆಯೊಳಗೆ ಕಾಲಿಡಬಾರದೆಂದೂ, ಸಭೆ-ಮೆರವಣಿಗೆ ಇತ್ಯಾದಿಗಳಲ್ಲಿ ಒಂದು ವರ್ಷದ ತನಕ ಭಾಗವಹಿಸಕೂಡದೆಂದೂ ತಿಳಿಸಿ, ಕಲ್ಕತ್ತಾ ನಗರದಿಂದ ಹೊರಗೆ ಕಳುಹಿಸಲಾಗಿದೆ.

ಹೋಲ್‌ವೆಲ್ ಸತ್ಯಾಗ್ರಹ

ಕಳೆದ ಮಂಗಳವಾರ ದಿನ ೧೨ ಮಂದಿ ಸತ್ಯಾಗ್ರಹಿಗಳ ಸೆರೆ ನಡೆದಿದೆ.

"ಹರಿಜನ"

ಇನ್ನು ಮುಂದೆ ಮಹಾತ್ಮರ ಸೂಚನೆಯಂತೆ ಈ ಇಂಗ್ಲೀಷ್ ವಾರಪತ್ರಿಕೆಯು ಶನಿವಾರದ ಬದಲು ಆದಿತ್ಯವಾರ ಪ್ರಕಟಿಸಲ್ಪಡುವುದಂತೆ.

ಜಿನ್ನರ ಕಸರತ್ತು

"ಮೊದಲಾಗಿ 'ಬಿಡುಗಡೆಯ ದಿನ', ಎರಡನೆಯದಾಗಿ 'ಪಾಕಿಸ್ಥಾನ ಯೋಜನೆ' ಈಗ ಮೂರನೆಯದಾಗಿ 'ರಾಷ್ಟ್ರಪತಿಗಳಿಗಿತ್ತ ಕಠಿಣ ಉತ್ತರ' ಇವುಗಳಿಂದ ಜಿನ್ನರೇ ತಮ್ಮ ಜಿನ್ನಕಥೆಯ ನಾಶಕ್ಕೆ ಮುಂದಾಗಿದ್ದಾರೆ" ಎಂದು ಮುಂತಾಗಿ ಜಿನ್ನರು ಮೌಲಾನಾ ಅಜಾದರಿಗಿತ್ತ ಉತ್ತರವನ್ನು ಮಿಲಿ ಮೆಹರಾಲಿಗಳು ಖಂಡಿಸಿದ್ದಾರೆ.

ವಿದ್ಯಾರ್ಥಿಗಳ ಠೀಕೆ

ಪಂಜಾಬ್ ಪ್ರಾಂತ್ಯದ ಮುಸ್ಲಿಂ ವಿದ್ಯಾರ್ಥಿಗಳ ಫೆಡರೇಶನಿನ ಕಾರ್ಯದರ್ಶಿಯು, "ಜಿನ್ನರ ಉತ್ತರ ಇಸ್ಲಾಮಿಗೆ ವಿರುದ್ಧವಾದ ಉತ್ತರ—ಸೋಲನ್ನೂ, ಸೇಡನ್ನೂ ತೋರಿಸುವ ಹೊಲಸು ಭಾವನೆ! ಜಿನ್ನರು ಕ್ಷಮೆ ಯಾಚಿಸಬೇಕು" ಎಂದಿದ್ದಾರೆ.

ಉಪವಾಸದಿಂದ ಕಂದಿದ ರೋಗಿಯು ಆಹಾರವನ್ನು ತ್ಯಜಿಸುವನು!

ಮಲೇರಿಯಾವಸ್ಥೆಯಲ್ಲಿ ದೊಡ್ಡ ಅಪಾಯವೆಂದರೆ ರೋಗಿಗೆ ಗಟ್ಟಿ ಆಹಾರವು ಅಸಹ್ಯಕರವಾಗುವುದು. ಆದರೂ ಆಗಲೇ ಉತ್ತಮ ಆಹಾರ ಬೇಕು. ಪರೆಗಳನ್ನು ರಚಿಸಿ ಶಕ್ತಿಗೂಡಿಸುವಂತಹ ಆಹಾರ.

ಹಾರ್ಲಿಕ್ಸ್ ಈ ಸಮಸ್ಯೆಯನ್ನು ಪರಿಹರಿಸಿರುವುದು. ಜಠರಕ್ಕೆ ಸ್ವಲ್ಪವೂ ತ್ರಾಸಕೊಡದೆ ಪೂರ್ಣ ಪೋಷಣೆಯನ್ನು ಕೊಟ್ಟು ಶರೀರಕ್ಕೆ ನವಶಕ್ತಿ ಚೈತನ್ಯಗಳನ್ನು ತುಂಬುವುದು.

ಹಾರ್ಲಿಕ್ಸ್ ಸೇವನೆಯಿಂದ ಸಾವಿರಾರು ಮಂದಿ ಮಲೇರಿಯಾ ವಿಪತ್ತಿನಿಂದ ಪಾರಾಗಿರುವರು. ಆದ್ದರಿಂದಲೇ ಅದು ಅವರ್ಜನೀಯ ಪಥ್ಯವೆಂದು ಪರಿಗಣಿಸಲ್ಪಟ್ಟು ಮುಖ್ಯ ಮುಖ್ಯ ಆಸ್ಪತ್ರೆಗಳಲ್ಲಿ ಉಪಯೋಗಿಸಲ್ಪಡುತ್ತಿದೆ.

ದ. ಕನ್ನಡ

ಪಾಣೆಮಂಗಳೂರು

ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ತಾ. ೧೪-೭-೪೦ನೇ ಸಾಯಂಕಾಲ ಘಂಟೆ ೫ಕ್ಕೆ ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪ್ರಥಮ ಮಹಾಸಭೆಯು ನಡೆದು, ಶ್ರೀ. ಪಿ. ಮಾಧವ ಪಡಿಯಾರರು ಅಧ್ಯಕ್ಷರಾಗಿಯೂ, ಶ್ರೀ. ಎನ್. ಉಪೇಂದ್ರ ನಾಯಕರು ಕಾರ್ಯದರ್ಶಿಯವರಾಗಿಯೂ, ಶ್ರೀ. ಕೃಷ್ಣ ಶ್ರೀನಿವಾಸ ಪೈಯವರು ಕೋಶಾಧಿಕಾರಿಗಳಾಗಿಯೂ ಸರ್ವಾನುಮತದಿಂದ ಚುನಾಯಿತರಾದರು. ಅಲ್ಲದೆ, ಇಬ್ಬರನ್ನು ಕಾರ್ಯಕಾರೀ ಮಂಡಳಿಗೆ ಆರಿಸಲಾಯಿತು. ಬಳಿಕ ಅಧ್ಯಕ್ಷಸ್ಥಾನವನ್ನು ಶ್ರೀ. ಮಾಧವ ಪಡಿಯಾರರವರು ವಹಿಸಿಕೊಂಡರು. ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು. "ಅಖಿಲ ಭಾರತ ಧುರೀಣರಲ್ಲೊಬ್ಬರಾದ ಶ್ರೀ. ಸುಭಾಸಚಂದ್ರ ಭೋಸರನ್ನು ದಸ್ತಗಿರಿ ಮಾಡಿದ ಬಗ್ಗೆ ಸಂಬಂಧಪಟ್ಟ ಸರಕಾರದ ಧೋರಣೆಯು ಖಂಡನೀಯವಿದೆ. ಕಲ್ಕತ್ತದ ಹೋಲ್‌ವೆಲ್ ಸ್ಮಾರಕದ ನಿರ್ಮಾಮಕ್ಕಾಗಿ ಬಂಗಾಲೀ ಬಂಧುಗಳು ನಡಿಸುವ ಜಲವಳವು ಅಭಿನಂದನೀಯವಿದೆ. ಬಂಗಾಲೀ ಬಂಧುಗಳ ಆ ಜಲವಳವು ಯಶಸ್ವಿಯಾಗಲೆಂದೂ ಅವರಿಗೆ ಈ ಸಮಿತಿಯ ನೈತಿಕ ಬೆಂಬಲವಿದೆಯೆಂದೂ ಈ ಸಮಿತಿಯು ಅಭಿಪ್ರಾಯ ಪಡುತ್ತದೆ." ಆ ಬಳಿಕ ಇಲ್ಲಿಯ ಸತ್ಯಾಗ್ರಹ ಸಮಿತಿಗೆ ಶ್ರೀ. ಯನ್. ಉಪೇಂದ್ರ ನಾಯಕರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಪೆರಡಾಲಕ್ಕೊಂದು ರೂ. ಡಿಸ್ಪೆನ್ಸರಿ

ಬಹಳ ಕಾಲದಿಂದ ಪೆರಡಾಲ ಗ್ರಾಮಸ್ಥರು ಈ ಕೇಂದ್ರ ಸ್ಥಳದಲ್ಲಿ ಒಂದು ರೂರಲ್ ಡಿಸ್ಪೆನ್ಸರಿಯ ಆತ್ಯಾವಶ್ಯಕತೆಯನ್ನು ಮನಗಂಡು ಆ ಬಗ್ಗೆ ಪ್ರಯತ್ನಿಸುತ್ತಿದ್ದಾರೆ. ಊರ ಮಹಾಜನರು ತಮ್ಮ ಕೇಳಿಕೆಯನ್ನು ಸರಕಾರಕ್ಕೂ, ಡಿಸ್ಟ್ರಿಕ್ಟ್ ಬೋರ್ಡ್ ಅಧಿಕಾರಿಗಳಿಗೂ ಬಿನ್ನಯಿಸಿಕೊಂಡಿದ್ದಾರೆ. ಮಲೇರಿಯಾ ಮೊದಲಾದ ನಿರಂತರ ರೋಗದಿಂದ ಸಂಕಷ್ಟಪಡುವ ಸಾಧಾರಣ ಹತ್ತು ಹದಿನೈದು ಮೈಲುಗಳ ಸುತ್ತುಮುತ್ತಲಿನ ಈ ಕೇಂದ್ರದ ಜನರ ಈ ಕೇಳಿಕೆಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಕೊಡುವುದು ಅವಶ್ಯ. ಇಲ್ಲಿಂದ ದೂರದ ಆದೂರು, ಕಾಸರಗೋಡು, ಮಂಜೇಶ್ವರ ಮೊದಲಾದ ಆಸ್ಪತ್ರೆಗಳಿಗೆ ಹೋಗಿ ಬಡ ಜನರು ಮದ್ದು ಮಾಡಿಸಿ ತಮ್ಮ ರೋಗಗಳನ್ನು ಗುಣ ಪಡಿಸಿಕೊಳ್ಳುವುದು ಬಹಳ ಕಷ್ಟತರವಾದ ಕಾರ್ಯವಾಗಿದೆ. ಈ ಬೇಡಿಕೆಯು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ, ಮನವಿ, ಕೇಳಿಕೆ, ಪ್ರತ್ಯಕ್ಷ ನಿವೇದನೆಗಳಿಂದ ಬಂದಿದೆಯಾದರೂ, ಅಧಿಕಾರಿಗಳ ಗಮನ ಈ ಕಡೆ ಸರಿದಿಲ್ಲವಾದುದರಿಂದ ಮಂದಿ ಬೇಸರಗೊಂಡಿರುವರೆಂದೊಂದು ಬಾತ್ಮಿ.

ಸ್ಥಳೀಯ ಮಿತ್ರಮಂಡಳಿ

"ಮಿತ್ರಮಂಡಳಿಯ ವಾರ್ಷಿಕ ಮಹಾಸಭೆಯು ಕೆನರಾ ಹೈಸ್ಕೂಲಿನಲ್ಲಿ ಕಳೆದ ತಾ. ೧೪ನೇ ಆದಿತ್ಯವಾರ ಸಾಯಂಕಾಲ ೪-೫೦ ಘಂಟೆಗೆ ಜರುಗಿ, ಕಳೆದ ವರ್ಷದ ಲೆಕ್ಕಪತ್ರ ಸಹಿತ ವರದಿ ವಾಚನ, ಹೊಸ ವರ್ಷದ ಯೋಜನೆ, ಅಧಿಕಾರಿಗಳ ಚುನಾವಣೆ ಮುಂತಾದುವು ನಡೆದುವು. ಶ್ರೀ. ಪಂಡಿತ ಮುಳಿಯ ತಿಮ್ಮಪ್ಪಯ್ಯ, ವಿದ್ವಾನ್, ಇವರು ಅಧ್ಯಕ್ಷರಾಗಿಯೂ ಶ್ರೀ. ಎಮ್. ವಾಸುದೇವ ಪ್ರಭು, ಎಮ್. ಎ, ಎಲ್. ಟಿ., ಇವರು ಉಪಾಧ್ಯಕ್ಷರಾಗಿಯೂ, ಶ್ರೀ. ಎಸ್. ಪಿ. ಭಟ್, ಇವರು ಕಾರ್ಯದರ್ಶಿಯಾಗಿಯೂ, ಶ್ರೀ. ಜೆ. ವಾಮನ ಭಟ್ಟ, ವಿದ್ವಾನ್, ಇವರು ಅಳಿಲ ಸೇವಾ ಗ್ರಂಥಮಾಲಾ ಸಂಪಾದಕರಾಗಿಯೂ ಚುನಾಯಿಸಲ್ಪಟ್ಟರು.

ಸನ್‌ಲೈಟ್ ನಿಮ್ಮ ಕುಟುಂಬಕ್ಕೆ ಕ್ಷೇಮವನ್ನುಂಟುಮಾಡಲಿ!

ಸನ್‌ಲೈಟ್ ನಿಮಗೆ ನೈರ್ಮಲ್ಯವನ್ನೊದಗಿಸಲಿ; ಆಗ ಅದು ನಿಮಗೆ ಆರೋಗ್ಯವನ್ನುಂಟುಮಾಡುವುದು. ಸನ್‌ಲೈಟನ್ನು ಉಪಯೋಗಿಸಿರಿ; ಅದು ನಿಮ್ಮ ಕೆಲಸವನ್ನು ಕಡಿಮೆಮಾಡಿ, ಬಟ್ಟೆಗಳನ್ನು ಕಾಪಾಡುವುದು. ಸನ್‌ಲೈಟನ್ನು ಉಪಯೋಗಿಸುವುದರಿಂದ ನಿಮ್ಮ ಹಣ ಉಳಿಯುವುದು. ಸನ್‌ಲೈಟ್ ಸೋಪು ಆರೋಗ್ಯ, ಸುಖ, ನೈರ್ಮಲ್ಯ, ಮತ್ತು ಸಂತೋಷವನ್ನೂ ನಿಮ್ಮ ಕುಟುಂಬಕ್ಕೆ ಕೊಡುವುದು. ಅದನ್ನು ನಿರಂತರವೂ ಉಪಯೋಗಿಸಿರಿ.



ನಿಜವಾದ ಸನ್‌ಲೈಟ್ ಸೋಪು ಈ ಪ್ಯಾಕೆಟ್ಟುಗಳಲ್ಲಿ ಮಾತ್ರ ಮಾರಲ್ಪಡುವುದು.

S. 21-435 KN LEVER BROTHERS (INDIA) LIMITED

ಪ್ರೇಮ ವಿದ್ಯಾಪೀಠ

ಕಳೆದ ಗುರುವಾರ ಪಂಡಿತ ತಾರಾನಾಥಜೀಯವರ ೫೦ನೇ ಜನ್ಮದಿನೋತ್ಸವವು ಬೆಂಗಳೂರಿನ ಬಸವನಗುಡಿಯಲ್ಲಿ ಆಚರಿಸಲ್ಪಟ್ಟಿತು. ಆ ಸಂದರ್ಭದಲ್ಲಿ ಪಂಡಿತರಿಗೆ ನಿಧಿಯನ್ನು ಅರ್ಪಿಸಲಾಯಿತು. ಮಾರನೆ ದಿನ ಸಂಜೆ ಪ್ರೇಮವಿದ್ಯಾಪೀಠದ ವಿದ್ಯಾರ್ಥಿಗಳಿಗಾಗಿ ಒಂದು ಸಂತೋಷಕೂಟವು ಏರ್ಪಡಿಸಲ್ಪಟ್ಟಿದ್ದು, ಆ ಸಂದರ್ಭದಲ್ಲಿ ತೇರ್ಗಡೆಹೊಂದಿದ ಆಯುರ್ವೇದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಿಕೆಗಳನ್ನು ಪಂಡಿತರು ಒಪ್ಪಿಸಿದರು. ಆ ಸಂದರ್ಭದಲ್ಲಿ ಪಂಡಿತರು ಪುಟ್ಟದೊಂದು ಭಾಷಣವಮಾಡಿದರು.

"ವಿದ್ಯೆ ಎಂದರೆ ಮಾನವನ ಇಹಪರದ ಉನ್ನತಿಗೆ ಸಾಧನವಾದುದು. ಆತ್ಮ ಹಿತ, ಪರಹಿತಗಳನ್ನು ಸಾಧಿಸುವುದೇ ವಿದ್ಯೆ. ಈಗ ನೀವು ಕಲಿತಿರುವ ವಿದ್ಯೆಯಿಂದ ಆತ್ಮಹಿತ ಮಾತ್ರವೇ ಅಲ್ಲದೆ ಪರಹಿತಗಳಲ್ಲಿ ಮುಖ್ಯವಾದ ಆರೋಗ್ಯದಾನ, ಅನ್ನದಾನಗಳನ್ನೂ ಸಾಧ್ಯವಾದಷ್ಟು ಮಟ್ಟಿಗೆ ಮಾಡಬಹುದು. ನಿಮ್ಮ ಹಾಗೂ ಪರರ ಉನ್ನತಿಯನ್ನು ಸಾಧಿಸಬಹುದು. ಆಯುರ್ವೇದವೆಂದರೆ ಕೇವಲ ಚಿಕಿತ್ಸಾ ಶಾಸ್ತ್ರವೆಂದಷ್ಟೇ ತಿಳಿಯದಿರಿ; ಅದು ಮಾನವ ಜೀವನದ ಹಿತಸಾಧನಾ ವಿಧಾನ. ಪ್ರಾಚೀನ ಋಷಿಗಳು ವಿದ್ಯೆಯನ್ನು ವೇದಾಂಗ-ವೇದಾಂತಗಳೆಂಬ ಎರಡು ವಿಭಾಗಗಳಾಗಿ ಮಾಡಿದ್ದಾರೆ. ಆಯುರ್ವೇದವು ವೇದಾಂಗ. ಅಂತೆಯೇ ಸಂಗೀತ, ಲಲಿತಕಲೆಗಳೇ ಮುಂತಾದವುಗಳೂ ವೇದಾಂಗಗಳಾಗಿವೆ. ವೇದಾಂಗವನ್ನು ಕಲಿದು ವೇದಾಂತವು ಸಾಧ್ಯವಿಲ್ಲ. ವೇದಾಂಗಗಳು ಇಂದ್ರಿಯಗಳ ಶಕ್ತಿಯನ್ನು ಹೆಚ್ಚಿಸಬಲ್ಲವುಗಳು. ಅವುಗಳ ಉಪಯೋಗದಿಂದ ಪರಹಿತ ಸಾಧನೆ ನಡೆಸಲೆಂದು ವೇದಾಂಗಗಳಿಗೆ ಒಪ್ಪಿದ ಸಕಲ ವಿದ್ಯೆಗಳೂ ಜನಿಸಿವೆ. ಇಂತಹ ವಿದ್ಯೆಗಳ ಪ್ರಸಾರದಿಂದ ನೀವು ಸ್ವಪರಹಿತಗಳನ್ನು ಸಾಧಿಸಿ ದೇಶೋನ್ನತಿಯನ್ನು ಸಾಧಿಸುವಿರೆಂದು ನಂಬಿದ್ದೇನೆ" ಎಂದರು.

ಮುಂದೆ ವಿದ್ಯಾಪೀಠದ ಹಳೆ ವಿದ್ಯಾರ್ಥಿಗಳ ಸಂಘವೊಂದು ಶ್ರೀಮತಿ ವೈದ್ಯಭಾನು ಜಿ. ಸುಮತೀಬಾಯಿಯವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ವಿದ್ಯಾಪೀಠದ ಪದವೀಧರರೂ, ಉದಾರ ದಾತೃಗಳೂ ಇದಕ್ಕೆ ಸದಸ್ಯರಾಗಿ ಸೇರಬಹುದು. ವಿಚಾರಗಳಿಗೆ ಕಾರ್ಯದರ್ಶಿ, ಪಿ. ವಿ. ಪಿ. ವಿದ್ಯಾರ್ಥಿ ಸಂಘ, ೨೪ ಕಾನಕಾನ ಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು ಸಿಟಿ — ಇವರಿಗೆ ಬರೆಯಬಹುದು.

ಧಾರವಾಡ

ಇಲ್ಲಿನ ವಿಕ್ಟೋರಿಯಾ ಹೈಸ್ಕೂಲಿನ ತುಂಬಿಗಳ ಬಳಗದ ನಾಲ್ಕನೆಯ ಹುಟ್ಟು ಹಬ್ಬವು ಇದೇ ತಾ. ೨೦ರಂದು ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗುವುದೆಂದೂ, ಆಗ ರಾಜಸೇವಾಸಕ್ತ ಶ್ರೀ. ಬಿ ಎಂ. ಶ್ರೀಕಂಠಯ್ಯನವರ ಭಾವಚಿತ್ರದ ಅನಾವರಣವನ್ನು ಶ್ರೀ. ಮಾಸ್ತಿಯವರು ನಡೆಸಲಿರುವರೆಂದೂ ತಿಳಿದುಬರುತ್ತದೆ.

ಕಲಾಸಿಗಳ ಉದಾರತೆ

ಅಮೇರಿಕೆಯ ಹಡಗು ಕಂಪೆನಿಯೊಂದು ಹಡಗನ್ನು ಧರ್ಮಾರ್ಥ ಇತ್ತರೆ, ಬ್ರಿಟನ್ನು ಅಮೇರಿಕೆಗೆ ಕಳುಹಿಸುವ ಮಕ್ಕಳ ವಿಚಾರದಲ್ಲಿ ಧನಿಕರು-ಬಡವರು ಎಂಬ ವ್ಯತ್ಯಾಸ ತೋರದಿದ್ದರೆ, ತಾವು ಧರ್ಮಾರ್ಥವಾಗಿ ಹಡಗ ನಡೆಸಿ, ಬ್ರಿಟನ್ನಿನಿಂದ ಮಕ್ಕಳನ್ನು ಅಮೇರಿಕೆಗೆ ತರುವೆವಾಗಿ, ಅಮೇರಿಕೆಯ ಕಲಾಸಿಗಳು ಸಾರಿದ್ದಾರೆ.

ಹೊಸ ಆಟ

ಹೋಲ್‌ವೆಲ್ ಸ್ಮಾರಕವನ್ನು ಸುಭಾಸರ ಸತ್ಯಾಗ್ರಹಕ್ಕೆ ಹೆದರಿ ಸರಕಾರವು ತೆಗೆಯಿಸಿತೆಂದು ಆಗಬಾರದೆಂದು ಬಂಗಾಲ ಮಂತ್ರಿಮಂಡಲ ಹೊಸ ಆಟ ಹೂಡಿದೆ. ಬಂಗಾಲ ಮಂತ್ರಿಮಂಡಲವು, ಈ ಸ್ಮಾರಕ, ಮಾರ್ಗದಲ್ಲಿ ತೊಡಕಾದುದರಿಂದ ಇದನ್ನು ದೂರಕ್ಕೆ ಒಯ್ಯುವ ಕುರಿತಾಗಿ ಹಿಂದೆಯೇ ಯೋಚಿಸುತ್ತಿತ್ತೆಂದು ಮಂತ್ರಿಮಂಡಲದಿಂದ ಸುದ್ದಿ ಹೊರಟಿದೆ. ಅಂತೂ ಈ ಯೋಜನೆ, ಅಭಿಮಾನ ಉಳಿಸಿಕೊಳ್ಳುವ ಆಟ-ಇವುಗಳ ನಡುವೆ ಇನ್ನೂರಕ್ಕೂ ಮಿಕ್ಕಿ ಮಂದಿ ಸೆರೆಯನ್ನು ಸೇರಿದ್ದಾರೆ. ಸತ್ಯಾಗ್ರಹ ಸಾಗುತ್ತಲೇ ಇದೆ.

ಶ್ರೀ. ಜಿ. ಎನ್. ಲಕ್ಷ್ಮಣ ಪೈಗಳವರಿಂದ ರಚಿತವಾದ

ಪದ್ಯಪುಸ್ತಕಗಳು

[ಈ ಮೂರು ಪುಸ್ತಕಗಳೂ ಮದರಾಸು ಟೆಕ್ಸ್‌ಟ್ ಬುಕ್ ಕಮಿಟಿಯವರಿಂದ **ಕ್ಲಾಸು ಉಪಯೋಗದ ಬಗ್ಗೆ** ಮಂಜೂರಾಗಿರುತ್ತವೆ. vide: Page 155 Part I of the consolidated List of Text-Books — 1940 — Fort St. George Gazette dated 30 — 4 — 1940]

೧. ಶಿಶುಗೀತಮಾಲೆ (ಸಚಿತ್ರ)

ಶಿಶುಗೀತಗಳನ್ನೂ ಅಭಿನಯಗೀತಗಳನ್ನೂ ಒಳಗೊಂಡ ಈ ಪುಸ್ತಕವು 1, 2, 3ನೆ ದರ್ಜೆಗಳ ಪದ್ಯಪಾಠಕ್ಕೂ ಸಂಗೀತಪಾಠಕ್ಕೂ ತಕ್ಕುದಾಗಿದೆ.

ಕ್ರಯ: 2½ ಆಣೆ.

೨. ಅಭಿನಯಗೀತಾವಳಿ (ಸಚಿತ್ರ)

ಅಭಿನಯಗೀತಗಳನ್ನೂ ಸಂಭಾಷಣಾರೂಪವಾದ ಕಥೆಗಳನ್ನೂ ಒಳಗೊಂಡ ಈ ಪುಸ್ತಕವು 3, 4ನೆ ದರ್ಜೆಗಳ ಪದ್ಯಪಾಠಕ್ಕೂ ಸಂಗೀತಪಾಠಕ್ಕೂ ತಕ್ಕುದಾಗಿದೆ.

ಕ್ರಯ: 3 ಆಣೆ.

[ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಒಫಿಸರ್, ಬಳ್ಳಾರಿ — ಇವರು ತಮ್ಮ N. Dis. No. 409-6 C/1939 29-9-39 ಪ್ರೊಸಿಡಿಂಗ್ಸ್ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿರುವ ಎಲ್ಲಾ ಕನ್ನಡ ಶಾಲೆಗಳಲ್ಲಿ ಈ ಪುಸ್ತಕವನ್ನು ಉಪಯೋಗಿಸಲಿಕ್ಕೆ ಶಿಫಾರಸು ಮಾಡಿದ್ದಾರೆ.]

೩. ಕನ್ನಡ ಪದ್ಯರತ್ನಾವಳಿ (ಸಚಿತ್ರ)

(ಪ್ರಥಮ ಭಾಗ)

ವಿವಿಧ ವಿಷಯಗಳ ಕುರಿತು ವಿವಿಧ ಪಾಠಗಳನ್ನೊಳಗೊಂಡ ಈ ಪುಸ್ತಕವು 4, 5ನೆ ದರ್ಜೆಗಳ ಪದ್ಯಪಾಠಕ್ಕೆ ತಕ್ಕುದಾಗಿದೆ. **ಕ್ರಯ: 3 ಆಣೆ.**

ಪುಸ್ತಕಗಳು ಸಿಗುವ ಸ್ಥಳ:

ಹರಿಹರ ಪುಸ್ತಕಾಲಯ, ಪುತ್ತೂರು. ಮತ್ತು ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಎಲ್ಲಾ ಪ್ರಮುಖ ಪುಸ್ತಕ ವ್ಯಾಪಾರಿಗಳಲ್ಲಿ.

ರಷ್ಯದ ಅಮೂಲ್ಯ ತೈಲ ಭಂಡಾರ

ಯುದ್ಧದ ಸರ್ವಶಕ್ತಿಯಾದ ಎಣ್ಣೆ ರಷ್ಯದಲ್ಲಿ ಎಷ್ಟಿದೆ? ರಷ್ಯ ಜರ್ಮನಿಯನ್ನು ಇದಿರಿಸಬಲ್ಲುದೇ?

ಸುಮಾರು ೧೦ ವರ್ಷಗಳ ಹಿಂದೆ ಕಂಡು ಹಿಡಿಯಿತು. ಈ ಪ್ರಾಂತ್ಯದಲ್ಲಿನ "ಇಶಿಂಬಾ [redacted]ಲ್ಲಿ ೧೯೩೨ರಲ್ಲಿ ದೊರೆತ ಎಣ್ಣೆ ಬರೇ "ನಂಬ್ರ ೨ನೇ ಬಾಕು".

ಬ್ರಿಟಿಷ್ ಕೋವಿ ಸಿಡಿಯುತ್ತಿದೆ.

ಮರಿಯ ಕಣಿಯೊಂದರಲ್ಲಿ ಬ್ರಿಟಿಷ್ ಗುಂಡಿಕ್ಕುವ ಸೇನಾ ತುಕ್ಕಡಿಯವರು ಫ್ರಾನ್ಸಿನೊಂದೆಡೆ ಅಭ್ಯಾಸ ನಡೆಸುತ್ತಿದ್ದಾರೆ.

ರಷ್ಯದ ಇಂದಿನ ಪರಿಸ್ಥಿತಿ ಏನೆ[redacted]ಪರ ಮೇಲೆ ಫ್ರಾನ್ಸ್ ಜರ್ಮನಿ – ಇಟಲಿಗಳು ಬಿದ್ದು ವೆಂದಾದರೆ, ತಡೆದುಕೊಳ್ಳುವ ಶಕ್ತಿ ರಷ್ಯಕ್ಕೆ ಇದೆಯೇ? ಇಂದಿನ ಯುದ್ಧದ ಸರ್ವಸ್ವವೆಂದರೆ ಎಣ್ಣೆ. ಅದಿಲ್ಲದೆ, ರಷ್ಯದ ೫೦ ಸಾವಿರಕ್ಕೂ ಮಿಕ್ಕಿದ ವಿಮಾನಗಳೂ ೧೮ ಸಾವಿರಕ್ಕೂ ಹೆಚ್ಚಾದ ಓಡುವ, ತೇಲುವ, ಹಾರಾಡುವ ಟ್ಯಾಂಕುಗಳೂ ಅಪ್ರಯೋಜಕವಾಗಬಹುದಷ್ಟೇ! ಅಂದ ಮೇಲೆ ರಷ್ಯದ ಎಣ್ಣೆಯ ಸಂಗ್ರಹದ ವಿಚಾರವಾಗಿ ತಿಳಿದುಕೊಳ್ಳೋಣ!

ಎಣ್ಣೆಯ ಸಂಗ್ರಹದ ಕಾರ್ಯದಲ್ಲಿ ಮೊದಲನೆಯ ಸ್ಥಾನವು ಅಮೇರಿಕೆಗೆ ಸಲ್ಲುತ್ತದೆ. ಎರಡನೆಯದು ರಷ್ಯಕ್ಕೆ. ೧೯೩೮ರಲ್ಲಿ ರಷ್ಯವು ಶೇಖರಿಸಿ ಇರಿಸಿದ ಎಣ್ಣೆ ಸುಮಾರು ೪೫೦ ಮಿಲಿಯಡ್ಸ್ ಟನ್‌ಗಳೆಂದು ತಿಳಿದುಬಂದಿದೆ. ಅದೇ ಆ ವರ್ಷದಲ್ಲಿ ರಷ್ಯದಲ್ಲಿ ದೊರೆತ ಎಣ್ಣೆ ೩೮೪೬೦ ಸಾವಿರ ಟನ್‌ಗಳು; ೧೯೩೯ರ ಮೊದಲರ್ಧದಲ್ಲಿ ದೊರೆತುದು ೧೪೬೦೦ ಸಾವಿರ ಟನ್‌ಗಳು. ಈ ಎಣ್ಣೆಯಲ್ಲಿ ಶೇಕಡಾ ೭೫ರಷ್ಟು ರಷ್ಯದ "ಬಾಕು". ಎಣ್ಣೆಯ ಗನಿಗಳಿಂದಲೇ ದೊರೆತಿದೆ. ಉಳಿದುದರಲ್ಲಿ "ಗ್ರೋಸ್ನಿ" ಮತ್ತು "ಮೈಕೋಪ್" ಗನಿಗಳಿಂದ ಶೇಕಡಾ ೧೬ರಷ್ಟೂ, ಮಧ್ಯ ಆಸ್ಯದಿಂದ ಶೇಕಡಾ ೮ರಷ್ಟೂ, "ಸಖಲಿನ್"ನಿಂದ ಶೇಕಡಾ ೧ರಷ್ಟೂ ದೊರೆತಿದೆ. ಆದರೂ ಪ್ರಪಂಚದ ಎಣ್ಣೆಯ ಹುಟ್ಟಿನ ವಿಚಾರವಾಗಿ ಯೋಚಿಸಿದರೆ, ರಷ್ಯವು ಜಗತ್ತಿನ ಎಣ್ಣೆಯ ಬರೇ ಶೇಕಡಾ ೧೧ ರಷ್ಟು ಮಾತ್ರ ಪಡೆಯುತ್ತಿದೆ.

ರಷ್ಯದ ಪ್ರಮುಖ್ಯ ಎಣ್ಣೆ ಗನಿಗಳೆಲ್ಲ ವೈರಿಗಳ ಪ್ರಾಂತ್ಯಕ್ಕೆ ಹತ್ತಿರದಲ್ಲೇ ಇವೆ. ರಷ್ಯದ ಕೊಕೇಶಿಯನ್ ಎಣ್ಣೆ ಗನಿಗಳು ಅದರ ವೈರಿಗಳ ಸೇನಾ ಸಂಗ್ರಹದಿಂದ ಅತಿ ದೂರವಾಗಿಲ್ಲ. ಆದರಿಂದಲೇ ರಷ್ಯನರು ವೈರಿಗಳ ಪ್ರಾಂತ್ಯದಿಂದ ದೂರವಿರುವ ಪ್ರದೇಶದಲ್ಲಿ ದೊರೆಯಬಹುದಾದ ಎಣ್ಣೆಯ ಕಡೆಗೇ ತಮ್ಮ ಗಮನವನ್ನು ಹೆಚ್ಚಾಗಿ ಹರಿಯಿಸಿದರು. ಇದರಿಂದಾಗಿ ರಷ್ಯವು "ನಂಬ್ರ ೨ನೇ ಬಾಕು" ಎಣ್ಣೆಯ ಗನಿಯನ್ನು ಕಂಡು ಹಿಡಿದಿದೆ. ಕಾಸ್ಪಿಯನ್ ಸಮುದ್ರದ ಬದಿಯಲ್ಲಿ ಕಾಮಾ ಮತ್ತು ಉರಾಲ್ಸ್ ಗನಿಗಳನ್ನು ಇದು ೪,೦೦೦ ಟನ್‌ಗಳು ಅದೇ ೧೯೩೭ರಲ್ಲಿ ೨ ಮಿಲಿಯ ಟನ್ ಎಣ್ಣೆ ಇಲ್ಲಿಂದ ದೊರೆತಿದೆ. ಇಂದಿನ ಯತ್ನದಿಂದಾಗಿ ಈ ಪ್ರಾಂತ್ಯದಿಂದ ೧೯೪೨ರ ಹೊತ್ತಿನಲ್ಲಿ ವರ್ಷಕ್ಕೆ ೭ ಮಿಲಿಯ ಟನ್‌ಗಳಂತೆ ಎಣ್ಣೆಯನ್ನು ಪಡೆಯಬಹುದೆಂಬ ಧೈರ್ಯ ರಷ್ಯಕ್ಕಿದೆ. ಅಲ್ಲದೆ ಈ ಗನಿಯಲ್ಲಿ ಇರಬಹುದಾದ ಎಣ್ಣೆ ೩೫೦ ಮಿಲಿಯಡ್ಸ್ ಟನ್‌ಗಳಿಗಿಂತಲೂ ಹೆಚ್ಚಾಗಬಹುದಂತೆ! ಅಲ್ಲದೆ ರಷ್ಯದ ಸುಮಾರು ೩೫೦೦ ಪರಿಶೋಧನೆಗಳ ಪರಿಣಾಮವಾಗಿ, ಹಲವೆಡೆ ಎಣ್ಣೆ ಇರುವುದೆಂದು ತಿಳಿದುಬಂದಿದೆ. ಎಣ್ಣೆಯನ್ನು ತೆಗೆಯಲು, ಶುದ್ಧಮಾಡಲು ಬೇಕಾದ ಯಂತ್ರ ಸಾಮಗ್ರಿಗಳ ಕೊರತೆಯಿಂದ ರಷ್ಯವು ಎಲ್ಲೆಡೆಯಲ್ಲೂ ಗನಿಗಳನ್ನು ರಚಿಸಿಕೊಂಡಿಲ್ಲ.

ಅಂತೂ ಇಂದು ರಷ್ಯವು ತನ್ನ ರಾಷ್ಟ್ರದ ಎಣ್ಣೆಯಲ್ಲಿ ಹೆಚ್ಚಿನ ಅಂಶವನ್ನು ವರ್ಷಂಪ್ರತಿ ಶೇಖರಿಸುತ್ತಾ ಬಂದು, ಅದಾವ ಯುದ್ಧಕ್ಕೂ ಬೆದರದ ಸ್ಥಿತಿಗೇರಿದೆ. ಇದೀ ಜಗತ್ತಿನ ಸಕಲ ಸೇನೆಗಳನ್ನು ಇದಿರಿಸಬಲ್ಲ ರಷ್ಯದ ಶಸ್ತ್ರಾಸ್ತ್ರ, ವಿಮಾನ ಇತ್ಯಾದಿಗಳು ವರ್ಷಗಟ್ಟಲೆ ಕಾದಾಡಲು ಬೇಕಾಗಬಹುದಾದಷ್ಟು ಎಣ್ಣೆಯನ್ನು ರಷ್ಯವಿಂದು ಶೇಖರಿಸಿ ಇರಿಸಿದೆ.

ಸಿನೆಮದ ಹುಚ್ಚು

ಲಕ್ನೌವಿನಲ್ಲಿ "ಫುಲ್ ಸೂಟ್" ಹಾಕಿ, "ಉದ್ದಕ್ಕೆ" ಸಾಗುತ್ತಿದ್ದ ವಿದ್ಯಾವಂತ "ಜಂಟಿಲ್ ಮ್ಯಾನ್" ಒಬ್ಬ ಚಿಕ್ಕ ಹುಡುಗಿಯೊಂದರ ಕೈಯಿಂದ ಸುಮಾರು ಒಂದು ರೂಪಾಯಿ ಬೆಲೆ ಬಾಳಬಹುದಾದ ಬಳೆಯನ್ನು ಹಾರಿಸಿ, ಕಾಲಿಗೆ ಬುದ್ಧಿ ಹೇಳಿದ. ಆದರೆ, ಹುಡುಗಿ ಗುಲ್ಲೆಬ್ಬಿಸಿದುದರಿಂದ, ಪೋಲೀಸರ ಕೈಗೆ ಸಿಕ್ಕಿ ಸ್ಟೇಶನ್ ಸೇರಿದ. ಪೋಲೀಸರು ಪ್ರಶ್ನಿಸಲಾಗಿ "ಉತ್ತಮ 'ಫಿಲ್ಮ್' ಒಂದು ಬಂದಿದೆ, ಅದನ್ನು ನೋಡಲು ಕಾಸಿರಲಿಲ್ಲ, ಅದಕ್ಕಾಗಿ ಕದ್ದೆ" ಎಂದು ಉತ್ತರವಿತ್ತ.

ಅವನು ಕನ್ಯಾದಾನ ಮಾಡುವುದನ್ನು ತಪ್ಪುವುದರಲ್ಲಿದ್ದನು


ನನ್ನ ತಮ್ಮನ ಮಗಳ ಮದುವೆಗೆ ಹೋಗುವುದಿಲ್ಲವೆಂದು ನಾನು ನಿರ್ಧರಿಸಿರುತ್ತೇನೆ. ಮೂರು ದಿನಗಳ ಪ್ರಯಾಣ, ಮತ್ತು ಮದುವೆಯ ಗದ್ದಲ ಕೋಲಾಹಲಗಳನ್ನು ಸಹಿಸುವುದಕ್ಕೆ ನಾನು ಬಹಳ ಬಳಲಿದ್ದೇನೆ
ಆದರೆ ಆಕೆಯ ತಂದೆಯ ಸ್ಥಾನವನ್ನು ನೀವು ಅಂಗೀಕರಿಸುವುದು ನಿಮ್ಮ ಧರ್ಮವಾಗಿದೆ. ನಮ್ಮ ಕುಟುಂಬದವರೆಲ್ಲಾ ಅಲ್ಲಿರುತ್ತಾರೆ. ನಾವು ಮುಹೂರ್ತವನ್ನು ನಡೆಸದಿದ್ದರೆ ಜನರೇನು ಹೇಳುವರು
ಏನಿದು ಅವಿನೇಕ ? ನೀನು ಅಳುತ್ತಿರುವುದು ಏಕೆ ?
ಈಚೆಗೆ ನೀವು ಸದಾ ಬೇಸತ್ತಿರುವದರಿಂದ ನಾವು ಯಾವುದನ್ನೂ ಮಾಡುತ್ತಿಲ್ಲ. ಸ್ನೇಹಿತರನ್ನೆಲ್ಲಾ ಕಳೆದುಕೊಳ್ಳುತ್ತಿದ್ದೇನೆ. ಈಗ ನೀವು ಮದುವೆಗೆ ಸಹಾ ಹೋಗುವುದಿಲ್ಲ. ಪಾಪ! ಆ ಬಡ ಹುಡುಗಿಯ ಮನಸ್ಸು ಹೇಗಿರಬಹುದೋ ಯೋಚಿಸಿ
ಅಲೋಚಿಸುವನು
ನನ್ನ ಹೆಂಡತಿಯ ಮಾತು ನಿಜ. ಈ ಮದುವೆ ನಾನು ನನ್ನ ತಮ್ಮನಿಗಾಗಿ ಮಾಡಬೇಕಾದ ಕರ್ತವ್ಯ. ಆಹಾ ನಾನಿಷ್ಟು ನಿತ್ರಾಣನೂ ನಿರುತ್ಸಾಹಿಯೂ ಆಗದಿದ್ದರೆ ಗೃಹಕೃತ್ಯದ ವಿಚಾರದಲ್ಲಿ ಹೆಚ್ಚು ಶ್ರದ್ಧೆಯನ್ನು ಮಹಿಸುತ್ತಿದ್ದೆ. ಏಕೆ ನಾನು ಸದಾ ಬೇಸತ್ತಿರುವೆನೋ ನನಗೇ ಅಚ್ಚರಿಯಾಗಿದೆ. ವೈದ್ಯರನ್ನು ನೋಡುವುದು ಒಳ್ಳೆಯದು
ಅದರಂತೆಯೇ ಅವನು ವೈದ್ಯರನ್ನು ಕಾಣಲು ಹೊರಟನು
ನನ್ನಲ್ಲಿ ತ್ರಾಣವೇ ಉಳಿದಿರುವುದಿಲ್ಲ. ವೈದ್ಯರೆ ನಾನು ಪ್ರಾತಃಕಾಲ ಏಳುವಾಗಲೂ ಸಹ ಸುಸ್ತಾಗಿರುತ್ತೇನೆ.
ನಿಸ್ಸಂದೇಹವಾಗಿಯೂ ಇದು "ಪ್ರಾತಃಕಾಲದದೌರ್ಬಲ್ಯ" ನೀವು ಹಗಲೆಲ್ಲಾ ಮೆಚ್ಚುಮಾಡುವ ಶಕ್ತಿಯು ನಿಮಗೆ ನಿದ್ರಿಸುವಾಗ ಪುನರುಜ್ಜೀವಿತವಾಗುವದಿಲ್ಲ. ಆದ್ದರಿಂದ ನೀವು ಬಳಲಿ ನಿರುತ್ಸಾಹಿಗಳಾಗಿರುತ್ತೀರಿ. ಪ್ರತಿ ರಾತ್ರಿಯೂ ಮಲಗುವಾಗ ಒಂದು ಲೋಟ ಹಾರ್ಲಿಕ್ಸ್ ಸೇವಿಸಿ. ೭ ನಿಮಿಷದಲ್ಲಿಯೇ ನೀವು ಸಮರ್ಥರಾಗುವಿರಿ
ಪ್ರತಿರಾತ್ರಿಯೂ ಪಾಲಿಸಲೇಬೇಕಾದ ಅದ್ಭುತ ಗುಣವನ್ನುಂಟು ಮಾಡುತ್ತದೆ
ನಿನಗೊಂದು ಆಚ್ಚರಿಯ ಸಮಾಚಾರ. ನಾವುಗಳು ಮದುವೆಗೆ ಬರುತ್ತೇವೆಂದು ಬರೆದಿರುತ್ತೇನೆ
ಎಷ್ಟು ಸೊಗಸಾದ ಮದುವೆ ಎಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ನಾವು ಇಲ್ಲಿಗೆ ಬಂದುದು ನನಗೆ ಬಹಳ ಸಂತೋಷವಾಯಿತು
ಹಾರ್ಲಿಕ್ಸ್ ಕದ ನೂರರಷ್ಟು ಪುಷ್ಟಿಕರವಾಗಿರುವುದರಿಂದ ಅಶಕ್ತಿಯನ್ನು ನವಚೈತನ್ಯವನ್ನಾಗಿ ಮಾರ್ಪಡಿಸುತ್ತದೆ. ಹಾರ್ಲಿಕ್ಸ್‌ನಲ್ಲಿ ತುಂಬ ಕೆನೆಯುಳ್ಳ ಹಸುವಿನ ಹಾಲು ಮತ್ತು ಪುಷ್ಟಿಯನ್ನುಂಟು ಮಾಡುವ ಹುರಿದ ಗೋಧಿ ಮತ್ತು ಜವೆ ಗೋಧಿಯ ಸಾರವು ಸೇರಿರುತ್ತದೆ. ದರಲ್ಲಿ ಹಿಟ್ಟು ಲೇಕವೂ ಇರುವುದಿಲ್ಲ.
ಎಲ್ಲಾ ವ್ಯಾಪಾರಿಗಳಲ್ಲೂ ಇರುವ ಹಾರ್ಲಿಕ್ಸ್ ಗ್ಲಾಸ್ ವಿಕ್ಸರ್ ಅನ್ನೇ ಉಪಯೋಗಿಸಿರಿ
HORLICKS
Horlicks Mixer

ನಿಮಗೆ ಸರಿಯಾಗಿ ನಿದ್ರೆಬಾರದಿದ್ದರೆ, ಆಯಾಸದಿಂದ ಎದ್ದರೆ, ಅಶಕ್ತರೂ, ನಿರುತ್ಸಾಹಿಗಳೂ ಆದರೆ, ನೀವು "ಪ್ರಾತಃಕಾಲದದೌರ್ಬಲ್ಯ"ದಿಂದ ಪೀಡಿತರಾಗಿರುವಿರಿ

ಹಾರ್ಲಿಕ್ಸ್ ತೆಗೆದುಕೊಳ್ಳಿರಿ

ಸುಖವಾಗಿ ನಿದ್ರಿಸುವಿರಿ. ಉತ್ಸಾಹದಿಂದ ಏಳುವಿರಿ. ಮತ್ತು ದಿನವೆಲ್ಲಾ ಹೆಚ್ಚು ಚೈತನ್ಯದಿಂದಿರುವಿರಿ.

ಮೈಸೂರು ಸಂಸ್ಥಾನದ ಸುದ್ದಿಗಳು

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು

ಜೈಲ್ ಸುಧಾರಣಾ ಸಮಿತಿ

ಮೈಸೂರು ಜೈಲ್ ಸುಧಾರಣಾ ಸಮಿತಿಯು ದಿ॥ ಬ॥ ಕೆ. ಎಸ್. ಜಂದ್ರಶೇಖರಯ್ಯರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಂಗಳೂರು ಮತ್ತು ಮೈಸೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಮತ್ತು ಇನ್ನೂ ಅನೇಕರ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು.

ಜೈಲ್ ಸುಧಾರಣಾ ಸಮಿತಿಯು ದಕ್ಷಿಣ ಭಾರತದ ಕೆಲವು ಮುಖ್ಯ ಜೈಲುಗಳಿಗೆ ಭೇಟಿ ಕೊಟ್ಟು, ಅಲ್ಲಿಯ ವಿಷಯಗಳನ್ನು ತಿಳಿದು ಕೊಳ್ಳಲು ಸರಕಾರದವರು ಅನುಮತಿ ಕೊಟ್ಟಿರುವರು.

ಗ್ರಾಂಟನ್ನು ಹೆಚ್ಚಿಸಲಾಯಿತು

ಮೈಸೂರು ಸರಕಾರದವರು ಪ್ರಸಕ್ತ ಸಾಲಿನಲ್ಲಿ ಗ್ರಾಮಾಭಿವೃದ್ಧಿ, ಸಾರ್ವಜನಿಕ ಕಾರ್ಯಗಳಿಗಾಗಿ ಮತ್ತು ವಿಲೇಜ್ ಪಂಚಾಯಿತಿಗಳಿಗೆ ಕೊಡುವ ಗ್ರಾಂಟನ್ನು ೫೦,೦೦೦ ರೂಪಾಯಿಗಳಿಗೆ ಹೆಚ್ಚಿಸಿರುವರು. ಇದರಲ್ಲಿ ಮಲೆನಾಡಿಗೆ ೩೦,೦೦೦ ರೂಪಾಯಿಗಳು, ಮತ್ತು ಮೈದಾನ ಪ್ರದೇಶಗಳಿಗೆ ೨೦,೦೦೦ ರೂಪಾಯಿಗಳು.

ಸರಕಾರದ ಕೊನೆಯ ಅಂದಾಜು ಪಟ್ಟಿ

೧೯೪೦-೪೧ನೇ ಸಾಲಿಗೆ ಕೊನೆಯದಾಗಿ ತಯಾರಿಸುವ ಮೈಸೂರು ಸರಕಾರದ ಆಯ ವ್ಯಯದ ಪಟ್ಟಿಯಲ್ಲಿ ಜಮಾ ಖರ್ಚು ಮತ್ತು ಉಳಿತಾಯವು ಈ ರೀತಿ ಇರುವುದು. ಜಮಾ ರೂ. ೪,೩೯,೦೬,೦೦೦, ಖರ್ಚು ರೂ. ೪,೩೮,೬೧,೦೦೦. ಉಳಿತಾಯ ರೂ. ೪೫,೦೦೧.

ದಿ॥ ಜ॥ ರ ತೀರ್ಪಿನ ಬಗ್ಗೆ ತರಾವು ಮೈಸೂರಿನಲ್ಲಿ ಬಾರ್ ಕೌನ್ಸಿಲ್ ಏರ್ಪಡಬೇಕು

ಬೆಂಗಳೂರು ಲಾ ಅಸೋಸಿಯೇಶನಿನ ವಿಶೇಷ ಸಭೆಯು ನಡೆಯಿತು.

ಶ್ರೀ. ಹೆಚ್. ಸಿ. ದಾಸಪ್ಪನವರ ಮೇಲೆ ಲೀಗಲ್ ಪ್ರಾಕ್ಟೀಶನರ್ಸ್ ಆಕ್ಟ್ ಪ್ರಕಾರ ಹಾಕಲಾಗಿದ್ದ ಮೊಖದ್ದಮೆಯಲ್ಲಿ ಮೈಸೂರು ಚೀಫ್ ಜಸ್ಟಿಸ್‌ರು ತಮ್ಮ ತೀರ್ಪಿನಲ್ಲಿ "ಈ ದೇಶದಲ್ಲಿ ಅಸಹ್ಯವೆಂಬುದು ಕೇವಲ ರಾಜಕೀಯ ಉದ್ಧಾರದ ಕೆಳ ಮಟ್ಟಕ್ಕೆ ಇಳಿದಿರುವುದರಿಂದಲೇ ರೆಸ್‌ಪಾಂಡೆಂಟರು ಆದರ ಅರ್ಥವನ್ನೂ ಬೆಲೆಯನ್ನೂ ಗಣನೆಗೆ ತಂದಿಲ್ಲ" ಎಂದು ತಿಳಿಸಿರುವುದಕ್ಕೆ ಈ ಸಂಘವು ವಿಷಾದಿಸುತ್ತದೆ.

ವಕೀಲ ವೃತ್ತಿಯ ಹಿತರಕ್ಷಣೆಯ ದೃಷ್ಟಿಯಿಂದ ಸಂಸ್ಥಾನದಲ್ಲಿ ಬಾರ್ ಕೌನ್ಸಿಲ್ ಸ್ಥಾಪನೆಯಾಗುವುದು ಆವಶ್ಯಕವೆಂದು ತರಾವು ಮಾಡಿತು.

ಪೊಲಿಟಿಕಲ್ ಅಸೆರ್ಸ್ ಕಮಿಟಿ

ಪೊಲಿಟಿಕಲ್ ಅಸೇರ್ಸ್ ಕಮಿಟಿಯು ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಸಾರ್ವತ್ರಿಕ ಚುನಾವಣೆಗಳನ್ನು ಮುಂದು ವರಿಸುವ ಬಗ್ಗೆ ಬಂದಿದ್ದ ನ್ಯಾಯವಿಧಾಯಕ ಸಭೆ ಮತ್ತು ಪ್ರಜಾ ಪ್ರತಿನಿಧಿ ಸಭೆಯ ಅಭಿ ಪ್ರಾಯಗಳನ್ನು ವಿಮರ್ಶಿಸಿ, ಚುನಾವಣೆಗಳನ್ನು ಮುಂದಿನ ಮಾರ್ಚಿ ತಿಂಗಳಿನಲ್ಲಿ ನಡೆಸಬೇಕೆಂದು ತೀರ್ಮಾನಿಸಿತು.

ವೃತ್ತಿ ಕಂದಾಯ

ಒಂದು ತಿಂಗಳಿಗೆ ೧೦೦ ರೂಪಾಯಿಗಳಿಗಿಂತ ಕಮ್ಮಿ ಸಂಬಾವನೆ ಬರುವವರ ವೃತ್ತಿ ಕಂದಾಯವನ್ನು ರದ್ದು ಪಡಿಸಬೇಕೆಂಬ ಬೆಂಗಳೂರು ನಗರ ಸಭೆಯವರ ತರಾವನ್ನು ಸರಕಾರದವರು ಮನ್ನಿಸಿರುವರು.

ವಸ್ತು ಪ್ರದರ್ಶನದ ಆರಂಭೋತ್ಸವ ಪ್ರಥಮ ಸಚಿವರಿಂದ

ದಯಾಲ್ ಬಾಗಿನಲ್ಲಿ ತಯಾರಾಗಿರುವ ವಸ್ತು ಪ್ರದರ್ಶನವನ್ನು ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಎನ್. ಮಾಧವರಾಯರು ಆರಂಭಿಸಿದರು. ಪ್ರದರ್ಶನವು ಅಂದವಾಗಿ ಏರ್ಪಾಡಾಗಿತ್ತು. ಶ್ರೀ. ಸಿ. ಆರ್. ಕಾಮತ್ ರವರು ಪ್ರಥಮ ಸಚಿವರನ್ನು ಸ್ವಾಗತಿಸಿ ಸಣ್ಣ ವರದಿಯನ್ನೊಪ್ಪಿಸಿದರು.

ಲಾಯರ್ ಕೊಲೆ ಮೊಖದ್ದಮೆ

ಬೆಂಗಳೂರು ಲಾಯರ್ ಕೊಲೆ ಮೊಖದ್ದಮೆಯು ಸ್ಪೆಶಲ್ ನ್ಯಾಯಾಧೀಶರ ಸಮ್ಮುಖದಲ್ಲಿ ನಡೆಯಿತು. ಐದನೆ ಮತ್ತು ಏಳನೆ ಆಪಾದಿತರು ವಿಲ್ಲಿನ ತಯಾರಿಕೆಗೆ ಹೇಗೆ ಸಂಬಂಧಿಸಿದ್ದಾರೆ ಎಂಬ ಬಗ್ಗೆ ವಾದವಿವಾದವು ನಡೆಯಿತು. ನ್ಯಾಯಾಧೀಶರು ಈ ವಾದವಿವಾದದ ಬಗ್ಗೆ ತಮ್ಮ ಆರ್ಡರು ಕೊಡುತ್ತ ಪ್ರೊಸಿಕ್ಯೂಷನ್ನಿನವರು ಈಗ ಸೂಚಿಸಿರುವ ಪ್ರಕಾರ ವಿಲ್ಲು ಹೇಗೆ ತಯಾರಿಸಲ್ಪಟ್ಟಿತೆಂಬುದಕ್ಕೆ ಮೊದಲನೆ ಮತ್ತು ಐದನೆ ಆಪಾದಿತರು ಹೇಗೆ ಸಂಬಂಧಿಸಿರುವರೆಂಬುದನ್ನು ಸಾಕ್ಷ್ಯದ ಮೂಲಕ ತೋರ್ಪಡಿಸಲು ನಾನು ಅಪ್ಪಣೆ ಕೊಡುತ್ತೇನೆ ಎಂದರು.

"ತಾಯಿನಾಡು ಪತ್ರಿಕೆ"ಯ ಮೇಲೆ "ಕಂಟೆಂಪ್ಟ್ ಆಫ್ ಕೋರ್ಟ್" ಗೌ॥ ಅಡ್ವೋಕೇಟರ ಅರ್ಜಿ ವಜಾ ಹೈಕೋರ್ಟಿನಲ್ಲಿ ತೀರ್ಪು

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು

ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸ್ ರಾದ ಸರ್ ಟಿ. ಆರ್ಸಿರೈಲಿಯವರೂ, ಜಸ್ಟಿಸ್ ತಿಂಗಾರುವೇಲು ಮೊದಲಿಯಾರ್‌ರವರೂ ಕಳೆದ ಮಾರ್ಚಿ ತಿಂಗಳಿನಲ್ಲಿ ಶ್ರೀ.ಗಳಾದ ಕೆ. ಟಿ. ಭಾಷ್ಯಂ ಅಯ್ಯಂಗಾರ್, ಕೆ. ಸಂಪಂಗಿ ರಾಮಯ್ಯ, ಟಿ. ರಾಮಾಚಾರ್ ಮತ್ತು ಕೆ. ಪಟ್ಟಾಭಿ ರಾಮನ್ ಇವರುಗಳನ್ನು ಲೀಗಲ್ ಪ್ರಾಕ್ಟೀಷನರ್ಸ್ ಕಾನೂನು ಪ್ರಕಾರ ತೀರ್ಪು ಕೊಟ್ಟು ವಕೀಲ ವೃತ್ತಿಯಿಂದ ವಜಾ ಮಾಡಿಸಿದರು. ಇದರ ಮೇಲೆ ಬೆಂಗಳೂರಿನ ಪ್ರಮುಖ ದೈನಂದಿನ ಪತ್ರಿಕೆಯಾದ "ತಾಯಿನಾಡು" ಕಳೆದ ಮಾರ್ಚಿ ೧೬ನೇ ತಾರೀಕಿನ ಸಂಚಿಕೆಯಲ್ಲಿ ಒಂದು ಅಗ್ರ ಲೇಖನವನ್ನು ಬರೆದು ತೀರ್ಪಿನ ನಾನಾ ಅಂಶ ಗಳನ್ನು ಪ್ರಸ್ತಾಪಿಸಿ, ಟೀಕೆ ಮಾಡಿದ್ದಿತು. ಈ ಅಗ್ರಲೇಖನವು "ಕಂಟೆಂಪ್ಟ್ ಆಫ್ ಕೋರ್ಟ್" ಗೊಳಗಾಗುವುದೆಂದೂ, ಆದಕಾರಣ, ತಾಯಿ ನಾಡು ಪತ್ರಿಕೆಯ ಸಂಪಾದಕರಿಗೂ ಮತ್ತು ಮಾಲಿಕರಿಗೂ ನೋಟೀಸ್ ಕೊಡಿಸಬೇಕೆಂದೂ, ಗವರ್ನಮೆಂಟ್ ಅಡ್ವೋಕೇಟರಾದ ಶ್ರೀ. ಮಿಲ್ಲೆ ಎಂ. ಲಕ್ಷ್ಮೀನಾರಾಯಣಪ್ಪನವರು ಹೈಕೋರ್ಟಿಗೆ ಒಂದು ಅರ್ಜಿಯನ್ನು ಸಲ್ಲಿಸಿದ್ದರು.

ಇದು ಚೀಫ್ ಜಸ್ಟಿಸ್ ಮತ್ತು ಜಸ್ಟಿಸ್ ವೆಂಕಟರಂಗಯ್ಯಂಗಾರ್ಯರ ಮುಂದೆ ವಿಚಾರಣೆಗೆ ಬಂದಿತು. ಗವರ್ನಮೆಂಟ್ ಅಡ್ವೋಕೇಟರು ವಾದ ಮಾಡುತ್ತಾ ಒಟ್ಟು ಎಂಟು ಮಂದಿ ಲಾಯರುಗಳ ಮೇಲೆ ಲೀಗಲ್ ಪ್ರಾಕ್ಟೀಷನರ್ಸ್ ಆಕ್ಟ್ ಪ್ರಕಾರ ನೋಟೀಸ್ ಜಾರಿಯಾಗಿತ್ತೆಂದೂ, ಕೋಲಾರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಎಂಟು ಮಂದಿಯ ಮೇಲೂ ಒಂದೇ ರೆಫರೆನ್ಸ್ ಮಾಡಿದ್ದರೆಂದೂ, ನಾಲ್ಕು ಕೇಸುಗಳು ಇತ್ಯರ್ಥವಾಗಿ ಇನ್ನು ನಾಲ್ಕು ಕೇಸುಗಳು ಹಾಗೆಯೇ ಉಳಿದಿರುವಾಗ "ತಾಯಿನಾಡು" ಪತ್ರಿಕೆಯವರು ಅಗ್ರಲೇಖನ ಬರೆದರೆಂದೂ, ಇತ್ಯರ್ಥವಾಗದೆ ಇದ್ದ ನ್ಯಾಯ ವ್ಯವಹಾರವನ್ನು ಟೀಕಿಸಿರುವರೆಂದೂ, ಆದಕಾರಣ ಕಂಟೆಂಪ್ಟ್ ಆಫ್ ಕೋರ್ಟ್ ಕಾನೂನಿಗೆ ಒಳಗಾಗುವುದೆಂದೂ ಹೇಳಿದರು.

ಅರ್ಜಿ ವಜಾ ಆಯಿತು

ಚೀಫ್ ಜಸ್ಟಿಸ್‌ರವರೂ ಮತ್ತು ಜಸ್ಟಿಸ್ ವೆಂಕಟರಂಗಯ್ಯಂಗಾರ್ಯರೂ ಅರ್ಜಿಯನ್ನು ವಜಾ ಮಾಡುತ್ತಾ,—"ಈಗ ನಮ್ಮ ಮುಂದೆ ಇರುವ ಅಗ್ರಲೇಖನದಲ್ಲಿ ಇತ್ಯರ್ಥವಾದ ಕೇಸುಗಳ ವಿವಾದವನ್ನು ಪ್ರಸ್ತಾಪಿಸಲಾಗಿದೆ. ಆ ಲೇಖನ ಬಂದ ತಾರೀಕಿನಲ್ಲಿ ಯಾವ ಕೇಸುಗಳು ಇತ್ಯರ್ಥವಾಗಿರುವುವೋ, ಅವನ್ನು ಮಾತ್ರ ಪತ್ರಿಕೆಯವರು ಟೀಕಿಸಿದ್ದಾರೆ. ಆದುದರಿಂದ ಅದು "ಕಂಟೆಂಪ್ಟ್ ಆಫ್ ಕೋರ್ಟ್" ಕಾನೂನಿಗೆ ಒಳಗಾಗುವುದಿಲ್ಲ. ಈ ಕಾರಣದಿಂದ ಅರ್ಜಿಯನ್ನು ವಜಾಮಾಡಲಾಗಿದೆ" ಎಂದರು. ಒಂದೊಂದು ಮೊಖದ್ದಮೆಯೂ ಪ್ರತ್ಯೇಕ ಪ್ರತ್ಯೇಕವಾದುದೆಂದರು.

ಪತ್ರಿಕೆಯ ಮೇಲೆ ಕಂಟೆಂಪ್ಟ್ ಆಫ್ ಕೋರ್ಟ್ ಕಾನೂನು ಪ್ರಕಾರ ಅರ್ಜಿಯನ್ನು ಸಲ್ಲಿಸಿರುವುದು ಸಂಸ್ಥಾನದಲ್ಲಿ ಇದೇ ಮೊದಲು.

ಮಲೇರಿಯಾ ಜ್ವರವನ್ನು ನಿರ್ಮೂಲಮಾಡಬೇಕೆಂಬ ಅಭಿಪ್ರಾಯದಿಂದ ಅನೇಕ ಕಂಪೆನಿಗಳು ನಾನಾ ತರದ ಔಷಧಗಳನ್ನು ತಯಾರಿಸಿದರೂ ಯಾವ ಔಷಧಕ್ಕೂ ಅಷ್ಟೊಂದು ಶಕ್ತಿಯು ಇರಲಿಲ್ಲ. ಕ್ವಿನಿನ್ ಮತ್ತು ಎಗ್ಯೂ ವಿುಕ್ಸ್‌ರುಗಳಿಂದ ಈ ಜ್ವರವನ್ನು ಗುಣಪಡಿಸುವುದು ಬಹಳ ಕಷ್ಟವಾಗಿಯದೆ. ಹಿಂದೂಸ್ಥಾನದ ಹವೆಯು ತೀತೋಷ್ಣವಾಗಿರುವುದು ಮತ್ತು ಪರದೇಶೀಯ ಔಷಧಗಳಿಗೆ ಇಲ್ಲಿ ಮಲೇರಿಯದಂಥ ಜ್ವರವನ್ನು ಗುಣಪಡಿಸುವಷ್ಟು ಶಕ್ತಿಯಿರುವುದಿಲ್ಲ. ಕ್ವಿನಿನ್ ಮತ್ತು ಕೇಲ್ಸಿಯಮ್‌ಗಳನ್ನು ತಕ್ಕ ಪ್ರಮಾಣದಲ್ಲಿ ಬೆರಸಿ, ಪ್ರಖ್ಯಾತಿಪಟ್ಟ ವೈದ್ಯರೊಬ್ಬರು "ಸೋನಾಮಿಲ್" ಎಂಬ ಬಿಲ್ಲೆಗಳನ್ನು ಅಂಥಾ ಜ್ವರಗಳಿಗಾಗಿಯೇ ತಯಾರಿಸಿರುವರು. ಈ ಬಿಲ್ಲೆಗಳು ಮಲೇರಿಯಾ ಜ್ವರವು ಎಷ್ಟು ಕಠಿಣವಾಗಿದ್ದರೂ ಅದನ್ನು ನಿರ್ಮೂಲಗೊಳಿಸುತ್ತವೆ. ಎಲ್ಲಾ ತರದ ಅವಧಿ ಜ್ವರಗಳನ್ನೂ ಎರಡು ದಿನಗೊಮ್ಮೆ ಬರುವ ಜ್ವರಗಳನ್ನೂ ಮಲೇರಿಯವನ್ನೂ ಈ ಬಿಲ್ಲೆಗಳು ಗುಣಪಡಿಸುತ್ತವೆ. ಅವು ಜನರಿಗೆ ಸಂಪೂರ್ಣ ಆರೋಗ್ಯವನ್ನು ಪುನಃ ಕೊಡುತ್ತವೆ.

25 ಬಿಲ್ಲೆಗಳ ಬಾಟ್ಲಿ 1ರ ಬೆಲೆ ರೂ. 1-4-0. 50 ಬಿಲ್ಲೆಗಳ ಬಾಟ್ಲಿ 1ರ ಬೆಲೆ ರೂ. 2-4-0.

ಹಿಂದುಸ್ಥಾನದ ಪ್ರತಿಯೊಂದು ಔಷಧಾಲಯದಲ್ಲಿಯೂ ಈ ಬಿಲ್ಲೆಗಳನ್ನು ಪಡೆಯಬಹುದು.

ಮುಖ್ಯ ವಿಜಂಟರು:—

ಕೊಪಾಲ್ಕಾ ಎಂಡ್ ಕೊ., ಲಿಮಿಟೆಡ್, ನ್ಯೂ ಭಾಟ್‌ವಾಡಿ, **ಬೊಂಬಾಯಿ 4.**

Stockists:—T. N. NATRAJ & CO., MYSORE.

ಸೋನಾಮಿಲ್ ಬಿಲ್ಲೆಗಳು

ಮಲೇರಿಯಾ, ಅವಧಿಜ್ವರ, ಇನ್‌ಫ್ಲುವೆನ್ಜಾ(ಶೀತಜ್ವರ) ಡೇಂಗ್ಯೂ(ಮುದುಕುಮಾರಿ)ಗಳಿಗೆ, ಅತ್ಯಂತ ಗುಣಕಾರಿಯಾಗಿವೆ.

LIFE INSURANCE

IS THE ONE INVESTMENT WHICH IN PEACE OR WAR KNOWS NO DEPRECIATION. IT IS THE ONLY SCIENTIFIC MEANS WHICH PLANS WITH PRUDENCE AND CERTAINTY THE HAZARDS OF UNKNOWN TOMORROW.

EV RY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

LET "POPULAR", THE SUCCESSFUL AND PROGRESSIVE LIFE OFFICE OF YOUR OWN DISTRICT, PLAN YOUR FUTURE.

THE POPULAR INSURANCE CO., LTD.,

HEAD OFFICE: **MANGALORE,** S. I.

ಡಿ'ವೆಲರನ ಐಯರ್‌ಲ್ಯಾಂಡ್

[೧ನೇ ಪುಟದಿಂದ]

ವಕ ದಳಗಳನ್ನು ರಚಿಸಿದವು. ಈ ಎರಡು ದಳಗಳೊಳಗೆ ಕಾದಾಟ ನಿಶ್ಚಯವೆಂದೂ ತಿಳಿದು ಬಂತು. ಪಾರ್ಲಿಮೆಂಟು ಎರಡು ಬಾರಿ ಈ ಬಿಲ್ಲನ್ನು ತೆಗೆದು ಹಾಕಿತು. ಅಷ್ಟರಲ್ಲಿ ೧೯೧೪ರ ಮಹಾಯುದ್ಧ ಆರಂಭವಾಯಿತು.

ಹೋಂ-ರೂಲ್ ಬಿಲ್ಲನ್ನು ಯುದ್ಧಾನಂತರ ತರುವುದೆಂದಾಯಿತು. ಐಯರ್‌ಲ್ಯಾಂಡಿನ ಸ್ವಾತಂತ್ರ್ಯ ಪ್ರೇಮಿಗಳು ಕೆಲವರು-"ತಮಗೆ ತಾವು" (ಸೀನ್-ಫೀನ್) ಎಂದು ಚಳವಳವನ್ನು ಆರಂಭಿಸಿ, ಜರ್ಮನರಿಗೆ ಸಹಕಾರಿಗಳಾಗಿ, ೧೯೧೬ರಲ್ಲಿ, ಡಬ್ಲಿನ್‌ನಲ್ಲಿ ಬಂಡಾಯ ನಡೆಸಿದರು. ಇಂಗ್ಲಾಂಡು ಹೆಚ್ಚಿನ ನಷ್ಟದಿಂದ ಇದನ್ನು ಹುಡಿಗೂಡಬೇಕಾಯಿತು. ಜರ್ಮನಿಯಿಂದ ಈ ಚಳವಳವನ್ನು ನಡೆಸಲೆಂದೇ "ಯು-ಬೋಟ್"ನಲ್ಲಿ ಬಂದ ಸರ್ ರೋಜರ್ ಕೇಸ್‌ಮೆಂಟ್ ಮುಂತಾದ ನಾಯಕರು ಗಲ್ಲಿಗೇರಿಸಲ್ಪಟ್ಟರು.

ಯುದ್ಧ ಮುಗಿದೊಡನೆ ಪುನಃ ಹೋಂ-ರೂಲ್ ಬಿಲ್ ಪಾರ್ಲಿಮೆಂಟನಲ್ಲಿ ತರಲ್ಪಟ್ಟತು. ಇದರಿಂದ ಅಲ್ಸ್ಟರ್ ಪ್ರಾಂತ್ಯಕ್ಕೆ ಬೆಲ್‌ಫಾಸ್ಟ್‌ನಲ್ಲೂ, ಐರಿಷ್ ಪ್ರಾಂತ್ಯಕ್ಕೆ ಡಬ್ಲಿನ್‌ನಲ್ಲೂ ಪಾರ್ಲಿಮೆಂಟುಗಳು ರಚಿತವಾದವು. ಆದರೆ ಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದು ತಿಳಿದ ಐರಿಷ್ ಜನತೆ, ಶಸ್ತ್ರಾಸ್ತ್ರದ ಬಂಡಾಯ ಆರಂಭಿಸಿ, ಐರಿಷ್ ಪೋಲೀಸರನ್ನು ಪ್ರತಿಯೊಬ್ಬರನ್ನು ಗುಂಡಿಟ್ಟು ಕೊಲ್ಲಲು ಹಾಗೂ ಸ್ವಾತಂತ್ರ್ಯ ಪ್ರಿಯರಲ್ಲಿ ಸಹಾನುಭೂತಿ ತೋರದವರ ಚಿತ್ರ ಹಿಂಸೆ ಮಾಡಲು ಆರಂಭಿಸಿದರು. ಇದರಿಂದ ಇಂಗ್ಲಾಂಡು ಸ್ಪೆಶಲ್ ಮಿಲಿಟರಿ ಪೋಲೀಸರನ್ನು ಐಯರ್‌ಲ್ಯಾಂಡಿಗೆ ಕಳುಹಿಸಬೇಕಾಯಿತು. ಇವರು ಕ್ರೂರತೆಯಲ್ಲಿ ಐರಿಷ್ ಸ್ವಾತಂತ್ರ್ಯಪ್ರೇಮಿಗಳಿಗಿಂತಲೂ ಇಮ್ಮಡಿಯಾದರೂ, ಐರಿಷ್ ಮಂದಿ ಇವರನ್ನೂ, ನೈಜ ಸೇನೆಯನ್ನೂ ಇದಿರಿಸಿದರು. ಪರಿಣಾಮವಾಗಿ ಬ್ರಿಟಿಷ್ ಸೇನೆ ತಾನು ತನ್ನ ಕೊಲೊನಿಗಳಲ್ಲಿ ಮಾಡಿದ ಸಾಹಸಗಳನ್ನೇ ತೋರಿತು. ಐರಿಷ್ ಪ್ರಾಂತ್ಯವನ್ನು ಸುಟ್ಟು, ಹುಡಿಗೂಡಿ, ಸ್ಮಶಾನವಾಗಿ ಮಾಡಿ-ನರಯಾಗವನ್ನು ಕೈಕೊಂಡಿತು. ಅಂತೂ ಈ ಹೋಮ ೧೯೨೧ರಲ್ಲಿ ಕೊನೆಗಂಡಿತು. ೧೯೨೨ರಲ್ಲಿ ಐಯರ್‌ಲ್ಯಾಂಡಿಗೆ ಡೊಮಿನಿಯನ್ ಸ್ವಾತಂತ್ರ್ಯ ದೊರಕಿತು. ಉತ್ತರ ಪ್ರಾಂತ್ಯವು ಬ್ರಿಟಿಷರದಾಗಿಯೇ ಉಳಿಯಿತು. ದಕ್ಷಿಣ ಬ್ರಿಟಿಷರಿಗೆ ಹೆದರಿದ್ದುದು ೧೯೨೩ರಲ್ಲಿ ಪುನಃ ಬಂಡಾಯವುಂಟಾಗಲು ಮುಂಡೆ ಕ್ರಮೇಣ ಸ್ವಾತಂತ್ರ್ಯ ಪಡೆಯುತ್ತಾ ಇಂದು ಡಿ'ವೆಲರನ ಅಧ್ಯಕ್ಷತೆಯಲ್ಲಿ ಸಂಪೂರ್ಣ ಸ್ವತಂತ್ರವಾಗಿದೆ.

Edited and Published by B. Vittal Rau at the Kanteerava Office, Maidan North Road, Mangalore.
Printed by U. Vittalacharya, Manager at the Dharma Prakash Press, Car Street, Mangalore.